ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಆಗಸ್ಟ್ 2024 ಮಾಸ ಪತ್ರಿಕೆ

ಸಂಪುಟ/Volume : 46
ಸಂಚಿಕೆ/Issue : 11
ಪುಟ/Pages : 12
ಬೆಲೆ/Price : ₹ 15/–

**Akhila Karnataka Shikshaka Samachar | August 2024 | Monthly**




## ರಾಷ್ಟ್ರದೇವೋಭವ



## ರಕ್ಷಾಬಂಧನದ ಶುಭಾಶಯಗಳು


A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

"ಭಾರತದ ಮೇಲಿನ ಆಕ್ರಮಣವನ್ನು ನಾವು ಸಹಿಸುವುದಿಲ್ಲ ಮತ್ತು ಒಂದಿಷ್ಟೂ ಭೂಮಿಯನ್ನು ಭಾರತೀಯರು ಪರಕೀಯರಿಗೆ ಬಿಟ್ಟುಕೊಡೆವು" ಎನ್ನುವುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ ದಿನ ಜುಲೈ26, 1999. ಅದನ್ನು "ಕಾರ್ಗಿಲ್ ವಿಜಯ ದಿನ" ಎಂದು ಹೆಮ್ಮೆಯಿಂದ ಹೇಳುತ್ತೇವೆ. 1971ರಲ್ಲಿ ಪಾಕಿಸ್ತಾನದ ಜೊತೆಗಿನ ಸಂಘರ್ಷ ಮತ್ತು 1998ರಲ್ಲಿ ಪರಮಾಣು ಪರೀಕ್ಷೆಗಳ ಉದ್ವಿಗ್ನತೆಯನ್ನು ಕಡಿಮೆ ಮಾಡುವುದಕ್ಕಾಗಿ 1999ರಲ್ಲಿ ಲಾಹೋರ್ ಘೋಷಣೆಗೆ ಸಹಿ ಹಾಕಿ ಭಾರತ, ಸ್ನೇಹದ ಬಾಹುಗಳನ್ನು ಚಾಚಿದರೆ ಪಾಕಿಸ್ತಾನ ಮುಜಾಹಿದ್ದೀನ್ ನುಸುಳುಕೋರರ ವೇಷದಲ್ಲಿ ತನ್ನದೇ ಸೈನಿಕರ ಕೈಯಲ್ಲಿ ಬಂದೂಕು ಕೊಟ್ಟು ಕಳುಹಿಸಿತು.

ಲಡಾಕ್ ಮತ್ತು ಕಾಶ್ಮೀರದ ಮಧ್ಯದ ಸಂಪರ್ಕವನ್ನು ಕಡಿತಗೊಳಿಸುವುದು ಹಾಗೂ ಕಾಶ್ಮೀರದಲ್ಲಿ ಉದ್ವಿಗ್ನತೆಯನ್ನು ಸೃಷ್ಟಿಮಾಡಿ ಕಾಶ್ಮೀರದ ಸಮಸ್ಯೆಯನ್ನು ಅಂತರಾಷ್ಟ್ರೀಯ ಸಮಸ್ಯೆಯನ್ನಾಗಿ ಮಾಡುವ ಉದ್ದೇಶದಿಂದ ಮೊದಲು ಲಡಾಕ್‌ನ ಬಾಲ್ಟಿಸ್ತಾನ್ ಜಿಲ್ಲೆಯ ಭಾಗವಾಗಿದ್ದ ಕಾರ್ಗಿಲ್‌ನಲ್ಲಿ ಎರಡು ದೇಶಗಳ ಒಪ್ಪಂದದಂತೆ ಚಳಿಗಾಲದಲ್ಲಿದ್ದ ಒಪ್ಪಂದವನ್ನು ಮುರಿದು ತನ್ನದೇ ಸೈನಿಕರೊಂದಿಗೆ ಸುಸಜ್ಜಿತ ಶಸ್ತ್ರಾಸ್ತ್ರಗಳೊಂದಿಗೆ ಕಾರ್ಗಿಲ್ ಎತ್ತರದ ತುದಿಯಿಂದ ದಾಳಿ ಪ್ರಾರಂಭಿಸಿತು. ಸಿಯಾಚಿನ್ ಹಿಮಚ್ಛಾದಿತ ಪ್ರದೇಶದಲ್ಲಿ ಮೇ 1999ರಲ್ಲಿ ಪ್ರಾರಂಭವಾದ ಕಾರ್ಗಿಲ್ ಯುದ್ಧ ಜುಲೈ 26, 1999ರಲ್ಲಿ ಭಾರತದ ವಿಜಯದೊಂದಿಗೆ ಮುಕ್ತಾಯಗೊಂಡಿತು. ಪಾಕಿಸ್ತಾನ ಸ್ನೇಹಕ್ಕೆ ಅರ್ಹ ಅಲ್ಲ ಎನ್ನುವುದನ್ನು ಮತ್ತೊಮ್ಮೆ ಸಾಬೀತು ಪಡಿಸಿತು. ಈ ಯುದ್ಧದಲ್ಲಿ ಭಾರತ ಅನೇಕ ಸೈನಿಕರನ್ನ ಕಳೆದುಕೊಳ್ಳಬೇಕಾಯಿತು. ಈ ಯುದ್ಧದಲ್ಲಿ ಪ್ರಾಣಾರ್ಪಣೆ ಮಾಡಿದ ವೀರರನ್ನು ಸ್ಮರಿಸಿ ಗೌರವ ಸಲ್ಲಿಸೋಣ ಹಾಗೂ ಪರಕೀಯರ ಕುತಂತ್ರಗಳ ಬಗ್ಗೆ ಎಚ್ಚರವಾಗಿರಬೇಕು ಎನ್ನುವುದನ್ನು ನೆನಪಿನಲ್ಲಿಡುವ ದಿನ ಇದಾಗಿದೆ.

ಭಾರತೀಯರೆಲ್ಲ ತಲೆ ಎತ್ತಿ ನಿಲ್ಲುವ ದಿನ ಆಗಸ್ಟ್-15. ಲಕ್ಷಾಂತರ ಭಾರತೀಯರ ನಿರಂತರ ಹೋರಾಟ ಮತ್ತು ಪ್ರಾಣ ತ್ಯಾಗದಿಂದ ಇಂಗ್ಲೀಷರನ್ನು ಈ ದೇಶದಿಂದ ಓಡಿಸಿ ಸ್ವಾತಂತ್ರ ಗಳಿಸಿದ ದಿನ ಸ್ವಾತಂತ್ರ್ಯ ದಿನಾಚರಣೆ. ಇದು ಕೇವಲ ಆಚರಣೆಯಲ್ಲ. ಇದೊಂದು ನಮ್ಮೆಲ್ಲರ ಹೆಮ್ಮೆ, ಸ್ವಾಭಿಮಾನದ ಹಾಗೂ ಸ್ವಾತಂತ್ರ ಗಳಿಸುವಲ್ಲಿ ತ್ಯಾಗ ಮಾಡಿದ ನಮ್ಮ ಪೂರ್ವಜರನ್ನು ಗೌರವ ಪೂರ್ವಕವಾಗಿ ಸ್ಮರಿಸುವ ದಿನ. ಪ್ರಪಂಚಕ್ಕೆ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ನೀಡಿದ ಆದರ್ಶಗಳಾದ ಅಹಿಂಸೆ, ಸತ್ಯಾಗ್ರಹ, ಚಳುವಳಿಗಳ ಸ್ಫೂರ್ತಿಯನ್ನು ನಾವೆಲ್ಲ ಪಡೆದು, ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗುವ ಹೊಣೆಗಾರಿಗೆ ನಮ್ಮೆಲ್ಲರ ಮೇಲಿದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- 2024ರ ಲೋಕಸಭಾ ಚುನಾವಣೆ ಹಿನ್ನೆಲೆ-ಮುನ್ನೆಲೆ – ಹೆಚ್ ನಾಗಭೂಷಣ್ ರಾವ್ 3
- ಪೂರ್ವಸೂರಿಗಳು – ನಂ. ನಾಗಲಕ್ಷ್ಮಿ 4
- ರಕ್ಷಾಬಂಧನ : ಐತಿಹ್ಯ ಮತ್ತು ಮಹತ್ವ ಡಾ॥ ಲೋಕೇಶ್ 7
- ಭಾರತೀಯ ಇತಿಹಾಸದ ವಿಕೃತೀಕರಣ 9
- ಅನ್ನದಾತನೆಂದರೆ ನಮಗೆಲ್ಲ ಹೆಮ್ಮೆಯಲ್ಲವೇ? – ಚಿದಾನಂದ ಪಾಟೀಲ್ 11
- ಬೀದರ್‌ನಲ್ಲಿ ಕ.ರಾ.ಮಾ.ಶಿ. ಸಂಘದ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ 12

# 2024ರ ಲೋಕಸಭಾ ಚುನಾವಣೆ ಹಿನ್ನೆಲೆ–ಮುನ್ನೆಲೆ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

1947 ರಲ್ಲಿ ಅಖಂಡವಾಗಿದ್ದ ಭಾರತವನ್ನು ಮೂರು ಭಾಗಗಳಾಗಿ ತುಂಡರಿಸಿ, ಅಧಿಕಾರ ಲಾಲಸೆಯಿಂದ ಪಡೆದ ಸ್ವಾತಂತ್ರ್ಯವನ್ನು ಒಪ್ಪಿಕೊಂಡ ಕೀರ್ತಿ ಕಾಂಗ್ರೆಸ್ ಪಕ್ಷದ್ದು. 1915 ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ ಗಾಂಧೀಜಿ ತಮ್ಮ ರಾಜಕೀಯ ಗುರು ಗೋಪಾಲ ಕೃಷ್ಣಗೋಖಲೆಯವರ ಸಲಹೆಯಂತೆ 1919 ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಇಂದಿನ ಕಾಂಗ್ರೆಸ್‌ನಂತೆ ಒಂದು ಪರಿವಾರದ ಚುನಾವಣಾ ಪಕ್ಷವಾಗಿರದೆ ಕಾಂಗ್ರೆಸ್ ಅಂದು ಒಂದು ಉದ್ದೇಶಕ್ಕಾಗಿ ಒಂದು ಚಳುವಳಿಯ ನೇತಾರನಾಗಿದ್ದಿತು. 1920 ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರ ನಿಧನಾ ನಂತರ ಈ ಚಳುವಳಿಯ ನೇತೃತ್ವ ಗಾಂಧೀಜಿಯವರ ಹೆಗಲೇರಿತ್ತು. 1915 ರಿಂದ 19 ರವರೆಗೆ ಇಡೀ ಭಾರತದ ಪ್ರವಾಸ ಮಾಡಿ ದಿನ ರಾಜಕೀಯ ಪರಿಸ್ಥಿತಿಯ ಅಧ್ಯಯನ ಮಾಡಿದ್ದ ಗಾಂಧೀಜಿ ಇಲ್ಲಿನ ಬಹು ಸಂಖ್ಯಾತ ಹಿಂದುಗಳ ಮತ್ತು ಮುಸಲ್ಮಾನರ ರೀತಿ ನೀತಿ, ಮನೋಭೂಮಿಕೆಯನ್ನು ಅರಿತರು. ಸ್ವಾತಂತ್ರ್ಯ ಪ್ರಾಪ್ತಿಗಾಗಿ ಹಿಂದೂ ಮುಸಲ್ಮಾನರ ಐಕ್ಯತೆಯ ರಾಗ ಹಾಡಲು ಪ್ರಾರಂಭಿಸಿದ್ದರು.

1929 ರ ಸೆಪ್ಟೆಂಬರ್‌ನಲ್ಲಿ ತಾವು ಆರಂಭಿಸಿದ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಹಿಂದೂ, ಮುಸ್ಲಿಂ ಐಕ್ಯತೆಗಾಗಿ ಹಿಂದು, ಮುಸ್ಲಿಂ ಇಬ್ಬರೂ ಸೇರಿ 'ಅಲ್ಲಾ ಹೊ ಅಕ್ಬರ್' ಕೂಗಬೇಕೆಂದು ಬರೆದರು. 'ಎವ್ವೆರಿ ಹಿಂದುಈಸ್ ಎ ಕವರ್ಡ್, ಅಂಡ್ ಎವ್ವೆರಿ ಮುಸ್ಲಿಂ ಈಸ್ ಅ ಬುಲ್ಲಿ' ಎಂಬ ಹೇಳಿಕೆಯನ್ನೂ ನೀಡಿದರು. ಟರ್ಕಿಷ್ ದೇಶದಲ್ಲಿ ಅಲ್ಲಿನ ನೇತಾರ ಖಲೀಫನನ್ನು ಅಲ್ಲಿನ ಜನರೇ ಪದಚ್ಯುತಗೊಳಿಸಿದ್ದಕ್ಕಾಗಿ ಭಾರತದ ಮುಸಲ್ಮಾನರನ್ನು ತೃಪ್ತಿಪಡಿಸಿ, ಒಲಿಸಿಕೊಳ್ಳುವುದಕ್ಕಾಗಿ 'ಖಿಲಾಫತ್ ಚಳುವಳಿ'ಯನ್ನು ಮುನ್ನಡೆಸಿದರು.

ಉತ್ತರಪ್ರದೇಶದಲ್ಲಿ ಖಿಲಾಫತ್ ಚಳುವಳಿಯ ನಾಯಕರಾಗಿದ್ದ, ಭಾರತ ವಿಭಜನೆಯ ಪ್ರತಿಪಾದಕರಾಗಿದ್ದ ಶೌಕತ್ ಅಲಿ ಮತ್ತು ಮಹಮದ್ ಆಲಿ ಸಹೋದರರ ಹೆಗಲ ಮೇಲೆ ಕೈ ಹಾಕಿ ನಡೆದಾಡಿದ ಗಾಂಧೀಜಿ 1923 ರ ಕಾಕಿನಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಮಹಮದ್ ಆಲಿಯನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಮಹಮದ್ ಆಲಿ ಜಿನ್ನಾ ಭಾರತದ ವಿಭಜನೆಯ ಪ್ರಸ್ತಾಪವನ್ನಿಟ್ಟಾಗ, 'ವಿಭಜನೆ ನನ್ನ ಶವದ ಮೇಲೆ ಮಾತ್ರ ಸಾಧ್ಯ' ಎಂಬ ಉದ್ಗಾರ ತೆಗೆದಿದ್ದ ಗಾಂಧೀಜಿ ,ಪತ್ರಿಕಾ ವರದಿಗಾರನೊಬ್ಬ 'ವಿಭಜನೆ ತಡೆಯಲು ನೀವು ಉಪವಾಸವನ್ನು ಆಚರಿಸುವಿರಾ?' ಎಂದು ಪ್ರಶ್ನಿಸಿದಾಗ 'ಕಾಂಗ್ರೆಸ್‌ನ ಹುಚ್ಚು ನಿರ್ಣಯಕ್ಕೆ ನಾನೇಕೆ ನನ್ನ ಪ್ರಾಣವನ್ನು ಒತ್ತೆ ಇಡಬೇಕು?' ಎಂದು ಉತ್ತರಿಸಿದ್ದರು. ಕೊನೆಗೂ ಕಾಂಗ್ರೆಸ್ ಸೋತು ಮುಸ್ಲಿಂ ಲೀಗ್ ಗೆದ್ದಿತ್ತು. ದೇಶ ಮುಬ್ಭಾಗವಾಗಿತ್ತು. ಕಾಂಗ್ರೆಸ್‌ನ ತುಷ್ಟೀಕರಣ ನೀತಿ ಲಕ್ಷಾಂತರ ಹಿಂದೂಗಳ ಪ್ರಾಣ, ಮಾನ, ಆಸ್ತಿ ಪಾಸ್ತಿಯನ್ನು ನಾಶಪಡಿಸಿತ್ತು.

ಪಂಡಿತ ನೆಹರು ಗಾಂಧೀಜಿಯವರ ಅಚ್ಚು ಮೆಚ್ಚಿನ ಶಿಷ್ಯ. ಬಾಲ್ಯದಲ್ಲಿ ಇಂಗ್ಲಿಷ್ ಮಹಿಳೆಯ ಆರೈಕೆ ಮೈಗೂಡಿಸಿಕೊಂಡದ್ದು ಪಾಶ್ಚಾತ್ಯ ಸಂಸ್ಕೃತಿ. ತಲೆಗೆ ತುಂಬಿಕೊಂಡದ್ದು ಸಮಾಜವಾದದ ಸಿದ್ಧಾಂತ. ಬಯಕೆ, ಏನಕೇನಪ್ರಕಾರೇಣ ಭಾರತದ ಪ್ರಧಾನಿಯಾಗುವುದು. ಗಾಂಧೀಜಿಯಿಂದ ಪಡೆದ ಆಸ್ತಿ ಮುಸ್ಲಿಂ ತುಷ್ಟೀಕರಣ ಮತ್ತು ಈ ಮಣ್ಣಿನಲ್ಲಿ ಮೂಡಿ ಬಂದ ಎಲ್ಲ ವಿಚಾರಗಳ ಬಗ್ಗೆ ತಿರಸ್ಕಾರ. ಸಾಧನೆ 1947 ರಿಂದ 1964 ರ ವರೆಗೆ 17 ವರ್ಷ ಪ್ರಧಾನಿಯಾಗಿದ್ದು. ಈ ಹದಿನೇಳೂ ವರ್ಷಗಳು ಭಾರತ ಕಂಡಿದ್ದು ನಿರಂಕುಶ ಪ್ರಜಾಪ್ರಭುತ್ವ.

ನೆಹರು ನಂತರ ಭಾರತದ 2 ನೇ ಪ್ರಧಾನಿಯಾಗಿ 9 ನೇ ಜೂನ್ 1964 ರಿಂದ 1966 ರ ಜನವರಿ 11 ರವರೆಗೆ ಕೇವಲ 1 ವರ್ಷ 7 ತಿಂಗಳು 2 ದಿನ ಮಣ್ಣಿನ ಮಗನಾಗಿ ದೇಶವನ್ನು ಮುನ್ನಡೆಸಿದ್ದು ಲಾಲ್ ಬಹದ್ದೂರ್ ಶಾಸ್ತ್ರಿಯವರು. 1965 ರ ಭಾರತ–ಪಾಕ್ ಯುದ್ಧದಲ್ಲಿ ಪಾಕಿಸ್ತಾನದ ಹೆಡೆಮುರಿ ಕಟ್ಟಿದ ಕೀರ್ತಿ ಅವರಿಗೇ ಸಲ್ಲಬೇಕು. ಯುದ್ಧಾ ನಂತರ ಭಾರತ–ಪಾಕ್ ನ ಸಂಧಾನ ಸಭೆಗೆ ತಾಷ್ಕೆಂಟ್‌ಗೆ ಹೋದಾಗ ಅಲ್ಲಿ ಆಕಸ್ಮಿಕವಾಗಿ ನಿಧನಹೊಂದಿದ್ದು ದೊಡ್ಡ ದುರಂತ.

1966 ರ ನಂತರ ಬಹುಕಾಲ ಭಾರತವನ್ನು ಆಳಿದ್ದು ಗಾಂಧಿ ಹೆಸರನ್ನು ಹೊತ್ತ ನೆಹರೂ ಸಂತಾನದ ಕುಡಿಗಳು. ಹೀಗಾಗಿ ಗಾಂಧಿ–ನೆಹರು ಪ್ರಣೀತ ಮುಸ್ಲಿಂ ತುಷ್ಟೀಕರನದ ನೀತಿ ಮುಂದುವರೆಯಿತು. ಈ ನೀತಿ ಪರಾಕಾಷ್ಠತೆಯನ್ನು ಕಂಡಿದ್ದು 2000 ದ ನಂತರ.

1966 ರಲ್ಲಿ ಶ್ರೀಮತಿ ಇಂದಿರಾಗಾಂಧಿ ಭಾರತದ ಪ್ರಧಾನಿಯಾಗಿ 1977 ರ ವರೆಗೆ ಮತ್ತೆ 1980 ರಿಂದ 1984 ರ ವರೆಗೆ .ಆಕೆಯ ನಂತರ ಆಕೆಯ ಮಗ ರಾಜೀವ್ ಗಾಂಧಿ 1984 ರಿಂದ 1989 ರ ವರೆಗೆ. ಆ ನಂತರ ಆತನ ಮಡದಿ ಸೋನಿಯಾ ಗಾಂಧಿ ಪ್ರಧಾನಿಯಲ್ಲದಿದ್ದರೂ ಪ್ರಧಾನಿಯಂತೆಯೇ ದರ್ಬಾರ್ ನಡೆಸಿದ್ದು 10 ವರ್ಷ, 2014 ರವರೆಗೆ.

**ಮುನ್ನೆಲೆ:** 1947 ರಿಂದ 2014 ರವರೆಗೆ ಭಾರತವನ್ನಾಳಿದ ಪ್ರಧಾನಮಂತ್ರಿಗಳಲ್ಲಿ ಅಟಲ್ ಬಿಹಾರಿ ವಾಜಪೇಯಿಯವರ 1996 ರಲ್ಲಿ 13 ದಿನಗಳು, 1998 ರಿಂದ 99 ರವರೆಗೆ 13 ತಿಂಗಳುಗಳು ಹಾಗೂ 1999 ರಿಂದ 2004 ರವರೆಗೆ 5 ವರ್ಷಗಳ ಕಾಲ ಖಂಡವನ್ನು ಹೊರತು ಪಡಿಸಿದರೆ ಉಳಿದ 67 ವರ್ಷಗಳ ಕಾಲ ನಮ್ಮನ್ನು ಆಳಿದ ಎಲ್ಲರೂ ಕಾಂಗ್ರೆಸ್ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವರೇ. ಈ ಎಲ್ಲರಿಗೂ ಹಿಂದು, ಹಿಂದುತ್ವ, ಹಿಂದೂ ಸಂಸ್ಕೃತಿ, ಪರಂಪರೆ, ಅದಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳೂ ಅಸ್ಪೃಶ್ಯ, ತಿರಸ್ಕಾರ ಯೋಗ್ಯ ಮತ್ತು ಸೆಕ್ಯುಲರ್ ವಿರೋಧಿ, ಆದರೆ ಅದೇ 'ಮುಸ್ಲಿಂ' ಎಂದರೆ

ಪುಟ 10 ಕ್ಕೆ ➤

# ಪೂರ್ವಸೂರಿಗಳು



**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**

(ಮುಂದುವರೆದದ್ದು)

ಮಾನ್ಯ ಕೃ.ನರಹರಿಯವರು ಒಬ್ಬ ಆದರ್ಶ ಶಿಕ್ಷಕರಾಗಿದ್ದರು. ಅವರು ಕಾರ್ಯ ನಿರ್ವಹಿಸಿದ ಬಿ.ಎಂ.ಎಸ್.ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದಿಗೂ, ಅಲ್ಲಿನ ವಿದ್ಯಾರ್ಥಿಗಳು ಅವರನ್ನು ಒಬ್ಬ 'ಲೆಜೆಂಡ್' ಎಂದು ಗುರುತಿಸುತ್ತಾರೆಂದು ತಿಳಿದಾಗ ಹೆಮ್ಮೆಯೊಂದಿಗೆ ಅಪಾರ ಕುತೂಹಲವೂ ಉಂಟಾಗಿತ್ತು. ವೃತ್ತಿಯಲ್ಲಿ ಅವರು ಪಡೆದುಕೊಂಡ ಯಶಸ್ಸಿನ ರಹಸ್ಯವೇನೆಂದು ತಿಳಿದುಕೊಳ್ಳುವ ಅಪೇಕ್ಷೆಯುಂಟಾಗಿತ್ತು.

**ಒಬ್ಬ ಆದರ್ಶ ಶಿಕ್ಷಕನಾಗಲು ಬೇಕಾದ ಅರ್ಹತೆಗಳು ಯಾವುವು? ಗುರುಕುಲಗಳ ವ್ಯವಸ್ಥೆಯಿದ್ದ ಕಾಲಕ್ಕೂ, ಪ್ರಸ್ತುತದ ವೈಜ್ಞಾನಿಕ ಪರಿಸರದ ಕಾಲಕ್ಕೂ ಈ ವಿಷಯದಲ್ಲಿ ಅಂತರವಿರುತ್ತದೆಯೆ? ಮಾಹಿತಿ ತಂತ್ರಜ್ಞಾನವು ಬಹಳ ಮುಂದುವರೆದಿರುವ ಈ ದಿನಗಳಲ್ಲಿ ಶಿಕ್ಷಕನ ಸ್ಥಾನಕ್ಕೆ ಮಹತ್ವ ಇದೆಯೆ?**

ಮೊದಲನೆಯದಾಗಿ ನಾನು ನನ್ನ ವೃತ್ತಿಯನ್ನು ಅತ್ಯಂತ ಶ್ರದ್ಧೆ ಮತ್ತು ಬದ್ಧತೆಯೊಂದಿಗೆ ನಿರ್ವಹಿಸಿದೆ. ಇದು ನನಗೆ ಸಂಘ ಕಲಿಸಿದ್ದ ಪಾಠ. ಏಕೆಂದರೆ ಯಾವುದೇ ವೃತ್ತಿ ಇರುವುದು ಸಮಾಜಕ್ಕೆ ಉಪಯೋಗವಾಗುವುದಕ್ಕೆಂದು. ನಂತರ ಸಂಬಂಧಿಸಿದ ವ್ಯಕ್ತಿ ಹಿತಬರುವುದು. ಮಾಡುವ ಯಾವುದೇ ಕೆಲಸ, ಅದು ಅತ್ಯಂತ ಚಿಕ್ಕದಿರಲಿ, ದೊಡ್ಡದಿರಲಿ ಶ್ರದ್ಧೆ ಮತ್ತು ಪರಿಶುದ್ಧವಾದ ಮನದಿಂದ ಮಾಡಬೇಕು. ಆಗಲೇ ಅದು ಪರಿಪೂರ್ಣವೆನಿಸಿಕೊಳ್ಳುವುದು. ಇದು ಎಲ್ಲ ವೃತ್ತಿಗಳಿಗೂ ಅನ್ವಯಿಸುತ್ತದೆ.

ಇನ್ನು ಶಿಕ್ಷಕ ವೃತ್ತಿಯ ವಿಷಯ. ಶಿಕ್ಷಕರಾದವರು ಮೊದಲುತಾವು ಬೋಧಿಸಬೇಕಾದ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಂಡಿರಬೇಕು. ಅದಕ್ಕೆ ಅಗತ್ಯವಾದ ಅಧ್ಯಯನವನ್ನು ಎಲ್ಲ ಮೂಲಗಳೊಂದಿಗೆ ಮಾಡಿರಬೇಕು. ಅದಕ್ಕೇ ಹೇಳುವುದು, 'ಎ ಟೀಚರ್ ಈಸ್ ಆಲ್ವೇಸ್ ಎ ಸ್ಟೂಡೆಂಟ್' ಅಂತ. ನಾನು ಮಾಡಿದ್ದು ಅದನ್ನೇ. ನನಗೆ ಕೊಟ್ಟಿದ್ದ ವಿಷಯವಾದ 'ಹೀಟ್ ಎಂಜಿನ್' ವಿಷಯದಲ್ಲಿ ಮಾಹಿತಿಗೋಸ್ಕರ ಟಾಟಾ ವಿಜ್ಞಾನಸಂಸ್ಥೆಯೂ ಸೇರಿದಂತೆ ಹಲವು ಸಂಸ್ಥೆಗಳ ಗ್ರಂಥಾಲಯಗಳಿಗೆ ಹೋಗಿ ಸಂಬಂಧಿಸಿದ ಪುಸ್ತಕಗಳನ್ನು ಅಧ್ಯಯನ ಮಾಡಿ, ಒಂದು ಮಾದರಿ ನೋಟ್ಸ್ ಸಿದ್ಧಪಡಿಸಿದೆ. ಏಕೆಂದರೆ ಆ ದಿನಗಳಲ್ಲಿ ಪಠ್ಯಪುಸ್ತಕಗಳು ಎಲ್ಲರಿಗೂ ಸುಲಭವಾಗಿ ಸಿಕ್ಕುತ್ತಿರಲಿಲ್ಲ. (ಈ ನೋಟ್ಸ್ ಮುಂದಿನ ವರ್ಷಗಳಲ್ಲಿಯೂ ಬೇರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳು ಸಹ ಬಳಸಿಕೊಂಡಿದ್ದರು. ಒಮ್ಮೆ ಶತಾವಧಾನಿ ರಾ.ಗಣೇಶ್ ಭೇಟಿಯಾದಾಗ 'ಯು.ವಿ.ಸಿ.ಯಲ್ಲಿ ನಿಮ್ಮ ನೋಟ್ಸ್ ಓದಿ ನಾನು ಪಾಸ್ ಮಾಡಿದೆ' ಎಂದು ಹೇಳಿದ್ದರು.) ನಾನು ಬೋಧಿಸಿದ ವಿಷಯವನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಅರ್ಥಮಾಡಿಸುವುದು ನನ್ನ ಕರ್ತವ್ಯವೆಂದು ನಾನು ನಂಬಿದ್ದೆ. ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತಿದ್ದೆ. ಅದು ನನ್ನ ಮಾನಸಿಕ ಸಿದ್ಧತೆಯೂ ಆಗಿತ್ತು.

**ಶಿಕ್ಷಕರಾದವರ ಮಾನಸಿಕ ಸಿದ್ಧತೆಯೆಂದರೇನು? ಅದನ್ನು ಹೇಗೆ ಮಾಡಿಕೊಳ್ಳುವುದು?**

ಶಿಕ್ಷಕರು ಮನದಲ್ಲಿ ತಾವು ವಿದ್ಯಾರ್ಥಿಗಳ ಹಿತಕ್ಕೆ ಏನು ಮಾಡಬೇಕೆಂದು ಮೊದಲಿಗೆ ಯೋಚಿಸಬೇಕು. ಅದಕ್ಕೆ ಬೇಕಾದ ಶ್ರಮ ಎಷ್ಟೇ ಕಷ್ಟದ್ದಾದರೂ ಪ್ರಾಮಾಣಿಕ ಪ್ರಯತ್ನ ಮಾಡುವ ಸಂಕಲ್ಪ ಹೊಂದಬೇಕು. ಇಲ್ಲಿ ಅವರು ಸ್ವಹಿತ, ಸ್ವಲಾಭಕ್ಕಿಂತ ವಿದ್ಯಾರ್ಥಿ ಹಿತದತ್ತ ಗಮನವಿಡಬೇಕು, ತಮ್ಮ ಅನಾನುಕೂಲಗಳನ್ನು ಕುರಿತೇ ಹೆಚ್ಚು ಯೋಚಿಸಬಾರದು. ಅದೇ ಅವರ ಮಾನಸಿಕ ಸಿದ್ಧತೆ.

ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಕಾಲೇಜು ಇದ್ದ ಜಾಗವು ಮೊದಲು ಒಂದು ಸೋಪ್ ಫ್ಯಾಕ್ಟರಿಯಾಗಿತ್ತು. ಬಿ. ಎಂ. ಶ್ರೀನಿವಾಸಯ್ಯನವರು ಒಂದು ಸೋಪ್ ಫ್ಯಾಕ್ಟರಿ ಆರಂಭಿಸಿದ್ದರು. ಅದಕ್ಕಾಗಿ ಕೆಲವು ಶೆಡ್‌ಗಳನ್ನು ಹಾಕಲಾಗಿತ್ತು. ತೆಂಗಿನಗರಿಗಳನ್ನು ಕತ್ತರಿಸಿ ಕೆಲವು ಕಡೆ ಮೇಲ್ಛಾವಣಿ ಹಾಕಲಾಗಿತ್ತು. ಅದರ ಕೆಳಗೆ ನಮ್ಮ ಪ್ರಯೋಗ ಶಾಲೆಗಳು. ಆಗ ಶಿಕ್ಷಕರಿಗೆಂದು ಮೀಸಲಾದ ಕೊಠಡಿಗಳಿರಲಿಲ್ಲ. ಆ ಲ್ಯಾಬೊರೇಟರಿಗಳ ಒಂದು ಮೂಲೆಯಲ್ಲಿಯೇ ಒಂದು ಕುರ್ಚಿ. ಒಂದು ಮೇಜು ಹಾಕಿರುತ್ತಿದ್ದರು. ಹಳಬರಿಗೆ ಒಂದು ಬೀರು, ಹೊಸಬರಿಗೆ ಅದೂ ಇಲ್ಲ. ಒಂದು ಸಲ ಶಿಕ್ಷಕರ ಮೀಟಿಂಗ್‌ನಲ್ಲಿ ಆಡಳಿತ ಮಂಡಳಿಯವರೊಂದಿಗೆ ಶಿಕ್ಷಕರೆಲ್ಲರೂ ತಮ್ಮ ಅನಾನುಕೂಲಗಳನ್ನು ಕುರಿತ ಆಕ್ಷೇಪಣೆಗಳನ್ನು ಹೇಳಿಕೊಂಡಿದ್ದರು. 'ನಮಗೆ ಒಂದು ಬೀರು ಇಲ್ಲ, ಕುಳಿತುಕೊಳ್ಳಲು ಕುರ್ಚಿಯಿಲ್ಲ, ಸರಿಯಾದ ಸ್ಥಳವಿಲ್ಲ, ಇತ್ಯಾದಿ'. ಆಗ ನಾನು ಮಾತ್ರ ವಿಭಿನ್ನವಾಗಿ ಮಾತನಾಡಿದ್ದೆ. "ಈ ಕಾಲೇಜು ಹೊಸದಾಗಿ ಆರಂಭವಾಗಿರುವಂತಹುದು. ನಾವು ಶಿಕ್ಷಕರಾದವರು ಹೆಚ್ಚಿನ ಸೌಲಭ್ಯಗಳನ್ನು ನಿರೀಕ್ಷಿಸಬಾರದು. .ನಾವಾಗಲೀ, ಮ್ಯಾನೇಜ್ಮೆಂಟಿನವರಾಗಲೀ ವಿದ್ಯಾರ್ಥಿಗಳಿಗೆ ಅಗತ್ಯವಾದ ಮೂಲಭೂತ ವ್ಯವಸ್ಥೆಗಳನ್ನು ಒದಗಿಸುವ ಕುರಿತು ಯೋಚಿಸಬೇಕು. ನಾವು ಹೇಗೆಬೇಕಾದರೂ ಹೊಂದಿಕೊಳ್ಳಬೇಕು. ಒಂದು ಕುರ್ಚಿ, ಸ್ಟೂಲ್ ಇದ್ದರೆ ಸಾಕು. ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕು. ನಾವೆಲ್ಲರೂ ಇಲ್ಲಿರುವುದು ವಿದ್ಯಾರ್ಥಿಗಳಿಗೋಸ್ಕರವೇ. ಅದರಿಂದ ನೀವು ಮ್ಯಾನೇಜ್ಮೆಂಟಿನವರು ಏನು ಖರ್ಚು ಮಾಡಬೇಕೆಂದಿರುವಿರೋ ಅದನ್ನು ವಿದ್ಯಾರ್ಥಿಗಳಿಗಾಗಿ ಮಾಡಿ. ನಮ್ಮ ಬಗ್ಗೆ ನೀವು ಯೋಚನೆ ಮಾಡಬೇಡಿ" ಎಂದು. ಶಿಕ್ಷಕರು ಮಾನಸಿಕವಾಗಿ ಹಾಗೆ ವಿದ್ಯಾರ್ಥಿಗಳ ಅನುಕೂಲದ ಬಗ್ಗೆಯೇ ಚಿಂತಿಸುವ ಸ್ತರದಲ್ಲಿರಬೇಕಲ್ಲದೆ ಸ್ವಾರ್ಥವೇ ಮೇಲುಗೈಯಾಗಿರಕೂಡದು. ಅದು ಉತ್ತಮ ಶಿಕ್ಷಕರ ಲಕ್ಷಣವಲ್ಲ. ಮತ್ತೊಮ್ಮೆ ನಾನು ತರಗತಿಯಲ್ಲಿ ಪಾಠಮಾಡುತ್ತಿದ್ದಾಗ ಮೇಲಿನಿಂದ 'ಫಾಲ್ಸ್ ರೂಫ್'ನ ಸ್ವಲ್ಪಭಾಗ ಉದುರಿ ನನ್ನ ತಲೆಯ ಮೇಲೆ ಬಿದ್ದು ಮೈಯೆಲ್ಲ ಧೂಳಾಯಿತಲ್ಲದೇ ನನಗೆ ಹೆಚ್ಚು ಪೆಟ್ಟೇನೂ ಆಗಲಿಲ್ಲ. ಹುಡುಗರೆಲ್ಲ ಗಾಬರಿಯಾದರೂ ನಾನು ಮಾತ್ರ ಮೈಮೇಲಿನ ಧೂಳನ್ನು ಕೊಡವಿ, ಪಾಠಕ್ಕೆ ತೊಂದರೆಯಾಗದಂತೆ ಯಥಾ ರೀತಿಯಲ್ಲಿ ಪಾಠವನ್ನು ಮುಂದುವರಿಸಿದ್ದೆ. ಅಷ್ಟರಲ್ಲಿ ಯಾರಿಂದಲೋ ವಿಷಯ ತಿಳಿದು ಆಡಳಿತ ಮಂಡಳಿಯವರು ಧಾವಿಸಿ ಬಂದಿದ್ದರು. ಗಾಬರಿ, ಆತಂಕಗಳಿಂದ

ಪುಟ 5 ಕ್ಕೆ ➤

➢ ಪುಟ 4 ರಿಂದ.....

ಅವರು ಏನಾಯಿತೆಂದು ಕೇಳಿದಾಗ ನಾನು ಶಾಂತವಾಗಿ ಏನೂ ಆಗಿಲ್ಲವೆಂದು ಉತ್ತರಿಸಿದಾಗ ಅವರೆಲ್ಲರೂ ಅಚ್ಚರಿಗೊಂಡಿದ್ದರು. ಇದು ನಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಹೊಂದಿರಬೇಕಾದ ಮಾನಸಿಕ ಸ್ಥಿರತೆ ಮತ್ತು ಸಿದ್ಧತೆ.

ನಾನು ಸೇರಿದಾಗ ಅದಾಗಲೇ ಕಾಲೇಜು ಆರಂಭವಾಗಿ ಸುಮಾರು 11 ವರ್ಷಗಳೇ ಕಳೆದಿದ್ದರೂ ಅಂತಹ ಅನುಕೂಲಗಳನ್ನು ಕಲ್ಪಿಸಲು ಆಗಿರಲಿಲ್ಲ. ಕಾಲೇಜಿಗೆ ಅನುದಾನ ಸಹ ಬಂದಿರಲಿಲ್ಲ. ನಾನು ಸೇರಿದ ಹತ್ತು ವರ್ಷಗಳ ನಂತರ ಅನುದಾನ ದೊರೆಯಿತು. ಆಡಳಿತ ಮಂಡಳಿಗೆ ಸಂಬಳ ಕೊಡುವುದು ತಪ್ಪಿತ್ತು. ಸ್ಥಾಪಕರಾದ ಬಿ.ಎಂ.ಶ್ರೀನಿವಾಸಯ್ಯ ಬಹಳ ದೊಡ್ಡ ಮನುಷ್ಯರು, ಅವರ ಮಗನೂ ಹಾಗೆಯೇ. ಸಜ್ಜನರು. ಅನುದಾನ ಆರಂಭವಾದ ನಂತರ ಅವರು ತಮಗೆ ಬರುತ್ತಿದ್ದ ಆದಾಯವನ್ನೆಲ್ಲ ಕಾಲೇಜಿನ ಅಭಿವೃದ್ಧಿಗೆ ಬಳಸತೊಡಗಿದರು.

**ವಿದ್ಯಾರ್ಥಿಗಳೊಂದಿಗೆ ತಾವು ಸಂಬಂಧವನ್ನು, ಬಾಂಧವ್ಯವನ್ನು ಬೆಳೆಸಿಕೊಂಡದ್ದು ಹೇಗೆ? ಕಾಲೇಜಿನ ಅತಿ ಜನಪ್ರಿಯ ಶಿಕ್ಷಕರೆಂಬ ಹೆಸರು ತಮ್ಮದಾಗಿತ್ತಲ್ಲವೆ?**

ನಾನು ತರಗತಿಗೆ ಪ್ರವೇಶಿಸಿದ ಮೊದಲ ದಿನವೇ ಹೇಳಿದ್ದು ಅವರಲ್ಲಿ ಆತ್ಮವಿಶ್ವಾಸವನ್ನು, ಧೈರ್ಯವನ್ನು ತುಂಬುವ ಮಾತುಗಳನ್ನು.. ಶಿಕ್ಷಕ, ವಿದ್ಯಾರ್ಥಿಗಳ ನಡುವೆ ಆತ್ಮೀಯತೆಯನ್ನು ಬೆಳೆಸುವುದೇ ಹಾಗೆ 'ನಿಮಗೆ ನಾನು ಮಾಡುವ ಪಾಠದಲ್ಲಿ ಯಾವುದೇ ಸಂದೇಹ ಬಂದಲ್ಲಿ, ಅದು ಎಷ್ಟೇ ಸರಳವಾದದ್ದಿರಲಿ ಕೇಳಲು ಹಿಂಜರಿಕೆಬೇಡ. ಯಾರೇನಂದು ಕೊಳ್ಳುವರೆಂಬ ಅಳುಕುಬೇಡ. ನನಗೇ ಏನಾದರೂ ತಿಳಿಯದ ಅಂಶವಿದ್ದರೆ, ಅದರ ಬಗ್ಗೆ ಓದಿಕೊಂಡುಬಂದು, ನಿಮಗೆ ತಿಳಿಸುತ್ತೇನೆ.' ಈ ಪ್ರಾಮಾಣಿಕತೆ ಶಿಕ್ಷಕರಾದವರಲ್ಲಿರಬೇಕು. ಎಲ್ಲವೂ ತಮಗೆ ತಿಳಿದಿದೆಯೆಂದು ಭಾವಿಸಿ, ವಿದ್ಯಾರ್ಥಿಗಳಿಗೆ ಏನೋ ಒಂದು ಉತ್ತರ ಹೇಳಿದರೆ ನಡೆಯುತ್ತದೆಂದುಕೊಳ್ಳಬಾರದು. ಯಾವುದೇ ವಿಷಯದ ಮೂಲಕ್ಕೆ ಹೋಗಿ ಅರ್ಥಮಾಡಿಕೊಳ್ಳುವುದು ಅಗತ್ಯ. ವಿದ್ಯಾರ್ಥಿಗಳಿಗೂ ಹಾಗೆಯೇ ಸ್ಪಷ್ಟತೆಯನ್ನು ನೀಡಬೇಕು. ಈ ರೀತಿ ನಾನು ಎಷ್ಟೋ ಸಲ ಮಾಡಿದೀನಿ. ಉದಾಹರಣೆಗೆ ಪೆಟ್ರೋಲ್ ಎಂಜಿನ್‌ನಲ್ಲಿ ಡೀಸೆಲ್ ಏಕೆಬಳಸಲಾಗದು? ಹಾಗೆಯೇ ಡೀಸೆಲ್ ಎಂಜಿನ್‌ನಲ್ಲಿ ಪೆಟ್ರೋಲ್ ಏಕೆ ಬಳಸಬಾರದು? ಎಂಬ ಪ್ರಶ್ನೆ ನನ್ನಲ್ಲಿಯೇ ಬಂತು. ಅನೇಕರನ್ನು ಕೇಳಿ ಉತ್ತರ ಸಿಕ್ಕದೆ, ಕಡೆಗೆ ಟಾಟಾ ವಿಜ್ಞಾನ ಮಂದಿರದ ಗ್ರಂಥಾಲಯದ ಪುಸ್ತಕಗಳನ್ನು ಓದಿ ಉತ್ತರ ಕಂಡುಕೊಂಡೆ. ಅದೇ ರೀತಿ ಒಮ್ಮೆ ಕತ್ತರಿಸುವ ಟೂಲ್‌ಗಳಿಗೆ ಸಂಬಂಧಿಸಿದ ವಿಷಯದ ಕುರಿತು ನಾನು ಸಿದ್ಧಪಡಿಸಿದ ನೋಟ್ಸ್ ಇಡೀ ರಾಜ್ಯದಲ್ಲಿ ಬಹುತೇಕ ಕಾಲೇಜುಗಳು ಬಳಸಿಕೊಂಡುವು. ನನ್ನ ಈ ಪ್ರಾಮಾಣಿಕತೆ ವಿದ್ಯಾರ್ಥಿಗಳಿಗೆ ನನ್ನ ಬಗ್ಗೆ ಗೌರವ, ವಿಶ್ವಾಸ ಮೂಡಲು ಕಾರಣವಾಯಿತು. ಅವರ ಮನೆಗಳಿಗೆ ಸಹ ಹೋಗಿ ಹೇಳಿಕೊಡುತ್ತಿದ್ದೆ. ಇತರ ಶಿಕ್ಷಕರಿಗೆ ತೊಂದರೆ ಕೊಡುತ್ತಿದ್ದ, ಕಾಲೇಜಿನಲ್ಲಿ ಗಲಭೆ ಎಬ್ಬಿಸುತ್ತಿದ್ದ ಇರಾನಿ ವಿದ್ಯಾರ್ಥಿಗಳೂ ಸಹ ನನ್ನಲ್ಲಿ ವಿಶ್ವಾಸ ಹೊಂದಿದ್ದರು. ಅವರ ಕಷ್ಟಗಳನ್ನು ನನ್ನಲ್ಲಿ ಹೇಳಿಕೊಳ್ಳುತ್ತಿದ್ದರು. ಅವರಿಗೂ ಯಾರಿಂದಲೂ ಯಾವುದೇ ಬಗೆಯ ಪ್ರತಿಫಲ ಪಡೆಯದೆ ನಾನು ಪಾಠ ಹೇಳಿಕೊಡುತ್ತಿದ್ದೆ. ಬಲವಂತವಾಗಿ ಹಣಕೊಟ್ಟರೂ ಅದನ್ನು ನಾನು ಜನಸೇವಾಸಂಸ್ಥೆಗೆ ಕೊಟ್ಟು, ರಸೀತಿ ತಂದುತೋರಿಸುತ್ತಿದ್ದೆ. ಪ್ರಿನ್ಸಿಪಾಲರ ಬಳಿಗೆ ಹೋಗುವ ಬದಲು ನನ್ನ ಬಳಿ ಬಂದು ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದರು. ಹೀಗೆ ವಿದ್ಯಾರ್ಥಿಗಳೊಂದಿಗೆ ನಾನು ವಿಶ್ವಾಸ ಬೆಳೆಸಿಕೊಂಡಿದ್ದೆ. ಇದು ನನ್ನ ಮಾನಸಿಕ ಸಿದ್ಧತೆಯ ಫಲ. ಯಾವಾಗ ಈ ಆತ್ಮೀಯತೆ ಗಟ್ಟಿಯಾಗುತ್ತದೋ ಆಗ ನಮ್ಮ ಬೋಧನೆಯೂ ಫಲಕಾರಿಯಾಗುತ್ತದೆ.

ಗುರುಕುಲಗಳಲ್ಲಿ ಈ ಸಂಬಂಧ ಇರುತ್ತಿತ್ತು. ಪರಸ್ಪರರಲ್ಲಿ ಒಂದು ಭಾವನಾತ್ಮಕ ಸಂವಹನೆಯಾಗದಿದ್ದರೆ ಅಲ್ಲಿ ಈ ಬಂಧ ಇರುವುದಿಲ್ಲ. ಪ್ರಸ್ತುತದಲ್ಲಿನ ಮಾಹಿತಿ ಮಾಧ್ಯಮಗಳ ಮೂಲಕ ಎಷ್ಟೇ ವಿಷಯಗಳು ತಿಳಿಯಲು ಸಾಧ್ಯವಾದರೂ ಪ್ರತ್ಯಕ್ಷವಾಗಿ ಗುರುಮುಖೇನ ಬೋಧನಾ ಕಾರ್ಯನಡೆಯುವುದು ಅಗತ್ಯ. ತರಗತಿ ಬೋಧನೆ ಒಳ್ಳೆಯದು. ಮೊದಲು ಅನೇಕ ವಿಷಯಗಳಿಗೆ ಪಠ್ಯಪುಸ್ತಕಗಳೇ ಎಲ್ಲರಿಗೂ ಸಿಕ್ಕುತ್ತಿರಲಿಲ್ಲ. ನಂತರದಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಹಲವರು ಅನೇಕ ರೀತಿಗಳಲ್ಲಿ ಬರೆದು ಸಿದ್ಧಪಡಿಸಿದ್ದರು. ವಿದ್ಯಾರ್ಥಿಗಳಿಗೆ ಯಾವುದನ್ನು ಯಾವುದರಲ್ಲಿ ಓದಬೇಕೆಂಬ ಗೊಂದಲವುಂಟಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಬೇಕು ಶಿಕ್ಷಕರ ಮಾರ್ಗದರ್ಶನ. ಆದುದರಿಂದ ಮುಖಾಮುಖಿ ಬೋಧನೆ ಹೆಚ್ಚು ಫಲಕಾರಿ. ಮೂಲಭೂತ ಅಂಶಗಳನ್ನು ಒಳಗೊಂಡ ಮಾಹಿತಿ ಅವರಿಗೆ ಅಗತ್ಯವಾಗಿರುತ್ತದೆ. ನಾನು ವಿದ್ಯಾರ್ಥಿ ಹಿತರಕ್ಷಣಾ ಸಮಿತಿಗೆ ಅಧ್ಯಕ್ಷನಾಗಿದ್ದುದೂ ಸಹ ಅವರ ಹಿತಾಹಿತಗಳನ್ನು ಅರಿಯುವ ಅವಕಾಶಗಳನ್ನು ಒದಗಿಸಿತ್ತು.

**ಶಿಕ್ಷಕರು ವೃತ್ತಿಗೆ ಸಂಬಂಧಿಸಿದಂತೆ ಪ್ರಾಮಾಣಿಕತೆಯನ್ನು ಮತ್ತು ನೈತಿಕತೆಯನ್ನು ಉಳಿಸಿಕೊಳ್ಳುವ ಅವಶ್ಯಕತೆ ಇದೆಯೆಂದಿರಲ್ಲ, ತಮ್ಮ ಅನುಭವದಲ್ಲಿ ಅದನ್ನು ವಿವರಿಸುತ್ತೀರಾ?**

ಯಾವುದೇ ವೃತ್ತಿಯ ಯಶಸ್ಸಿಗೆ ಇವೆರಡೂ ಬಹಳ ಮುಖ್ಯವಾಗುತ್ತವೆ. ಅದರಲ್ಲಿಯೂ ಗುರುಸ್ಥಾನದಲ್ಲಿರುವವರಿಗಂತೂ ಇವು ಅತಿಮುಖ್ಯವಾಗುತ್ತವೆ. ಉತ್ತಮ ವ್ಯಕ್ತಿತ್ವದ ಬುನಾದಿಯೇ ಇವೆರಡು ಗುಣಗಳು. ಪರೀಕ್ಷಾ ಕೊಠಡಿಯ ಉಸ್ತುವಾರಿ ಶಿಕ್ಷಕರಿಗೆ ಅತಿ ಜವಾಬ್ದಾರಿಯ ಕರ್ತವ್ಯವಾಗಿರುತ್ತದೆ. ಆದರೆ ನೈತಿಕತೆಯನ್ನು ಸ್ವತಃ ಹೊಂದಿಲ್ಲದಿರುವವರಿಗೆ ಈ ನಿರ್ವಹಣೆ ಕಷ್ಟವಾಗುತ್ತದೆ. ಜೊತೆಗೆ ಪ್ರಾಮಾಣಿಕತೆಯ ಬೆಂಬಲವೂ ಇಲ್ಲಿ ಮುಖ್ಯವಾಗುತ್ತದೆ. ನಮ್ಮ ಕಾಲೇಜಿನಲ್ಲಿ ನಾನು ಮೇಲ್ವಿಚಾರಕನಾಗಿರುತ್ತಿದ್ದ ಕೊಠಡಿಯಲ್ಲಿ ತಪ್ಪಿಯೂ ನಕಲು ಮಾಡಲು ಆಸ್ಪದ ನೀಡುತ್ತಿರಲಿಲ್ಲ. ಆಗ ಬಹಳಮಂದಿ ಇರಾನಿ ವಿದ್ಯಾರ್ಥಿಗಳಿರುತ್ತಿದ್ದು ಹಲವರು ರೌಡಿಗಳೆನಿಸಿಕೊಂಡಿದ್ದರು. ಅವರನ್ನು ಎದುರು ಹಾಕಿಕೊಳ್ಳಲು ಎಲ್ಲರೂ ಹೆದರುತ್ತಿದ್ದರು. ನಾನು ಮಾತ್ರ ಇದಕ್ಕೆ ಅಪವಾದವಾಗಿದ್ದೆ. ಒಮ್ಮೆ ಪರೀಕ್ಷಾ ಕೊಠಡಿಯಲ್ಲಿ ನಾನಿದ್ದಾಗ ಬಾಗಿಲಿನ ಬಳಿ ಒಬ್ಬ ಇರಾನಿ ಬಂದು ನಿಂತ. ಒಳಗಿದ್ದ ಗೆಳೆಯನಿಗೆ ನೆರವಾಗಲು ಆತ ಬಂದಿದ್ದ. ನಾನು ಹತ್ತಿರಹೋಗಿ 'ಏನುಬೇಕು?' ಎಂದು ಕೇಳಿದೆ. ಉತ್ತರಿಸಲಿಲ್ಲ. ಮೂರು ಬಾರಿ ಕೇಳಿದರೂ ಮಾತಾಡಲಿಲ್ಲ. ಆಗ ನಾನು ಎರಡೂ ಮುಷ್ಟಿ ಬಿಗಿಹಿಡಿದು ಅವನೆದುರು ನಿಂತು 'ವಿಲ್ ಯು ಕ್ವಿಟ್ ಆರ್ ನಾಟ್?' ಎಂದು ಜೋರಾಗಿ ಕೇಳಿದೆ. ಒಳಗಿದ್ದ ವಿದ್ಯಾರ್ಥಿಗಳೆಲ್ಲರೂ ನಮ್ಮತ್ತ ನೋಡತೊಡಗಿದ್ದರು. ಅವನು 'ಐ ವಿಲ್ ಸೀಯು' ಎಂದಿದ್ದ. ನಾನು 'ಐ ಯಾಮ್ ಆಲ್ಸೊ ಪ್ರಿಪೇರ್ಡ್' ಎಂದಿದ್ದೆ. ಆತ ಸುಮ್ಮನೆ ಅಲ್ಲಿಂದ ಕಾಲ್ತೆಗೆದಿದ್ದ. ಮತ್ತೊಮ್ಮೆ ನಕಲು ಮಾಡುತ್ತಿದ್ದ ಇರಾನಿಯನ್ನು ಹಿಡಿದಿದ್ದೆ. ಅವನು ದುರುಗುಟ್ಟಿನೋಡುತ್ತ 'ನಿಮ್ಮನ್ನು ಆಚೆ ನೋಡಿಕೊಳ್ಳುವೆ' ಎಂದಿದ್ದ. ನಾನೂ ಹಾಗೇ ಉತ್ತರಿಸಿದ್ದಲ್ಲದೆ ಆ ಮೇಲೆ ಬೇಕೆಂದೇ ಅವನ ಮುಂದೆಯೇ ತಿರುಗಾಡುತ್ತಿದ್ದೆ. ಆದರೆ ಅವನೇನೂ ಮಾಡಲಿಲ್ಲ. ಇದೆಲ್ಲಕ್ಕೆ ನನ್ನಲ್ಲಿದ್ದ ನೈತಿಕ ಧೈರ್ಯವೇ ಕಾರಣ. ನಾವು ವಿದ್ಯಾರ್ಥಿಗಳಾಗಿದ್ದಾಗ ಎಷ್ಟು ಪ್ರಾಮಾಣಿಕವಾಗಿ ನಡೆದುಕೊಂಡಿರುತ್ತೇವೆಯೋ ಅದಕ್ಕೆ ಅನುಗುಣವಾಗಿ ನಮ್ಮಲ್ಲಿ ನೈತಿಕ ಧೈರ್ಯ ತುಂಬಿರುತ್ತದೆ.

ಪುಟ 6 ಕ್ಕೆ ➢

➢ ಪುಟ 5 ರಿಂದ.....

**ತಾವು ಪರೀಕ್ಷಾದಳದ ಮುಖ್ಯಸ್ಥರಾಗಿದ್ದಾಗ ನಕಲು ತಡೆಯಲು ಯಾವ ರೀತಿ ಕ್ರಮಗಳನ್ನು ಕೈಗೊಂಡಿರಿ?**

ನಾನು ತಂಡದೊಂದಿಗೆ ಹಲವಾರು ಕಾಲೇಜುಗಳಿಗೆ ಭೇಟಿಕೊಡುತ್ತಿದ್ದೆ. ಕೆಲವು ಕಾಲೇಜುಗಳು, ಅದರಲ್ಲಿಯೂ ಪ್ರತಿಷ್ಠಿತವೆನಿಸಿಕೊಂಡಿದ್ದ ಕಾಲೇಜುಗಳೂ ಸಹ 'ಮಾಸ್ ಕಾಪಿ' ಮಾಡಿಸುತ್ತವೆಂಬ ಮಾಹಿತಿ ನಮಗೆ ಬಂದಿತ್ತು. ಬನ್ನೇರುಘಟ್ಟದ ರಸ್ತೆಯಲ್ಲಿನ ಕಾಲೇಜೊಂದು ನಮ್ಮ ತಂಡ ಬರುತ್ತಿರುವುದನ್ನು ದೂರದಿಂದಲೇ ಗಮನಿಸಿ ಮಾಹಿತಿ ಪಡೆಯುವ ವ್ಯವಸ್ಥೆ ಮಾಡಿಕೊಂಡಿತ್ತು. ಅದನ್ನು ತಿಳಿದ ನಾನು ತಂಡದೊಡನೆ ಕಾಲೇಜಿನ ಹಿಂಭಾಗದಿಂದ ಕಾಂಪೌಂಡ್ ಹಾರಿ ಪರೀಕ್ಷಾ ಕೊಠಡಿಗೆ ಹಠಾತ್ ಪ್ರವೇಶಿಸಿ 'ರೆಡ್ ಹ್ಯಾಂಡ್' ಆಗಿ ಹಿಡಿದು ಆ ಪರೀಕ್ಷಾ ಕೇಂದ್ರವನ್ನೇ ಕಿತ್ತುಹಾಕುವಂತೆ ಮಾಡಿದ್ದೆ. ಮತ್ತೊಮ್ಮೆ ತುಮಕೂರಿನ ಹೆಸರಾಂತ ಸಂಸ್ಥೆಯಲ್ಲಿ ಇದೇ ರೀತಿ 'ಮಾಸ್ ಕಾಪಿ' ಆಗುವ ಮಾಹಿತಿ ತಿಳಿದು ಅದನ್ನೂ ಪತ್ತೆಮಾಡಿ ಆ ಪರೀಕ್ಷಾ ಕೇಂದ್ರವನ್ನೂ ತೆಗೆದುಹಾಕಿಸಿದ್ದೆ. ನನ್ನ ಮಾತಿನಲ್ಲಿಕಂಟ್ರೋಲರ್ ತುಂಬ ವಿಶ್ವಾಸ ಹೊಂದಿರುತ್ತಿದ್ದರು. ಆದರೆ ಅ ಸಂಸ್ಥೆಯ ಸ್ಥಾಪಕರು ಬಂದು ತಮ್ಮ ಸಂಸ್ಥೆಯ ರೆಪ್ಯುಟೇಷನ್ಗೆ ಕಳಂಕ ಬರುತ್ತದೆಂದೂ ಮುಂದೆ ಒಂದೇ ಒಂದೂ ನಕಲಿನ ಘಟನೆ ನಡೆಯದಂತೆ ತಾವು ಜವಾಬ್ದಾರಿ ಹೊರುವುದಾಗಿ ಆಶ್ವಾಸನೆ ನೀಡಿದಾಗ, ಕಂಟ್ರೋಲರ್ ನನ್ನ ಒಪ್ಪಿಗೆಯ ಮೇಲೆ ಅವರಿಗೆ ಮರು ಅನುಮತಿ ನೀಡಿದ್ದರು. ಇವೆಲ್ಲ ನಮ್ಮ ಪ್ರಾಮಾಣಿಕ ಕರ್ತವ್ಯಕ್ಕೆ ಸಿಗುತ್ತಿದ್ದ ಪ್ರತಿಕ್ರಿಯೆಗಳು. ನಾನು ಹೇಳುತ್ತಿದ್ದುದು ಇಷ್ಟೇ, 'ಅಧಿಕಾರದ ಬಲತೋರಿಸಬೇಕೆಂದು ನಾನು ಬಯಸುವುದಿಲ್ಲ. ಯಾವ ಸಂಸ್ಥೆ ಅಥವಾ ವ್ಯಕ್ತಿಯ ಮೇಲೆ ವೈಯಕ್ತಿಕ ದ್ವೇಷ ನನಗಿಲ್ಲ. ಆದರೆ ಯಾವುದೇ ಕಾರ್ಯದಲ್ಲಿ ಪ್ರಾಮಾಣಿಕತೆ ಇರಬೇಕೆಂಬುದಷ್ಟೇ ನನ್ನ ವಿಚಾರ' ಎಂದು ಹೇಳಿದ್ದೆ. ನಾನು ಪರೀಕ್ಷಾದಳದಲ್ಲಿದ್ದಾಗ ಹೀಗೆ ನಕಲಿನ ಘಟನೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸಿದ್ದೆ.

**ಮೆಷಿನ್ ಡ್ರಾಯಿಂಗ್ ನಲ್ಲಿ ತಾವು ಪರಿಣತರು ಎಂದು ಹೇಳುತ್ತಾರೆ, ಆ ಸಾಧನೆಯ ಬಗ್ಗೆ ಸ್ವಲ್ಪ ಹೇಳಿ.**

ನನಗೆ ಮೆಷಿನ್ ಡ್ರಾಯಿಂಗ್ ಬಹಳ ಇಷ್ಟವಾದ ವಿಷಯ. ಅದು ಕಷ್ಟವಾದುದೂ ಹೌದು. ಮೂರ್ನಾಲ್ಕು ಕೋನಗಳಿಂದ ಮೇಲಿನಿಂದ, ಪಕ್ಕದಿಂದ, ಮುಂಭಾಗದಿಂದ ಹಿಂದಿನಿಂದ, ಅದರ ಸಂಪೂರ್ಣ ಚಿತ್ರ ಬರಬೇಕಾದರೆ ಗಮನಿಸಬೇಕಾಗುತ್ತದೆ. ನನಗೆ ಪರೀಕ್ಷೆಯಲ್ಲಿ ಆ ವಿಷಯದಲ್ಲಿ ನೂರಕ್ಕೆನೂರು ಅಂಕಗಳು ಬಂದಿದ್ದುವು.(ವಿದ್ಯಾರ್ಥಿಗಳು ಆ ಮಾತನ್ನು ನಂಬದಿದ್ದಾಗ ಒಮ್ಮೆ ನಾನು ನನ್ನ ಅಂಕಪಟ್ಟಿಯನ್ನು ತಂದುತೋರಿಸಿದ್ದೆ.) ಮುಂದಿನ ದಿನಗಳಲ್ಲಿ ಟಾಟಾ ಶಿಕ್ಷಣಸಂಸ್ಥೆಯಿಂದ ಹಲವಾರು ವಿದ್ಯಾರ್ಥಿಗಳು, ಮೈಕೋ ಸಂಸ್ಥೆಯಿಂದ ಅನೇಕ ಉದ್ಯೋಗಿಗಳು ನನ್ನಿಂದ ಮೆಷಿನ್ ಡ್ರಾಯಿಂಗ್ ಬಗ್ಗೆ ವಿವರವಾಗಿ ತಿಳಿದು ಸಂದೇಹಗಳನ್ನು ಪರಿಹರಿಸಿಕೊಳ್ಳಲು ಬರುತ್ತಿದ್ದರು. ಶಿಕ್ಷಕರಾದರೂ ಅವರು ಕಲಿಯುವುದು ಸದಾ ಇರುತ್ತದೆ. ನಾನೂ ಅಷ್ಟೆ, ನಮ್ಮಲ್ಲಿಗೆ ಕೆ.ಎಂ.ಜಯಂ ಎಂಬ ಒಬ್ಬರು ನಿವೃತ್ತ ಡ್ರಾಯಿಂಗ್ ಶಿಕ್ಷಕರು, ಡಿಪ್ಲೊಮಾ ಉತ್ತೀರ್ಣರಾಗಿದ್ದವರು, ಆದರೆ ಬಹಳ ಒಳ್ಳೆಯ ಶಿಕ್ಷಕರು ಬಂದರು. ನಾನು ಅವರಿಂದ ತುಂಬ ಕಲಿತೆ.ಮೆಷಿನ್ಗಳ ತ್ರೀ ಡೈಮೆನ್ಷನಲ್ ಡ್ರಾಯಿಂಗ್ ,ಅವುಗಳ ಸಣ್ಣ ಪುಟ್ಟ ತಿರುವುಗಳ ವಿನ್ಯಾಸ ಬಿಡಿಸುವುದು ಎಲ್ಲವನ್ನೂ ಅವರಿಂದ ಕಲಿತೆ. ಮೆಷಿನ್ಗಳ ಡ್ರಾಯಿಂಗ್ ಕಷ್ಟ. ನಾನು ಅವುಗಳ ಚಿತ್ರಗಳನ್ನು ಬೇರೆ ಬೇರೆ ಪುಸ್ತಕಗಳನ್ನು ಹುಡುಕಿ ದೊಡ್ಡ ದೊಡ್ಡ ಬೋರ್ಡ್‌ಗಳ ಮೇಲೆ ಪೂರ್ಣವಾಗಿ ಬಿಡಿಸುತ್ತಿದ್ದೆ. ಏಕೆಂದರೆ ಪುಸ್ತಕಗಳಲ್ಲಿ ಕೊಟ್ಟಿದ್ದನ್ನೇ ಬರೆಯಲು ಪರೀಕ್ಷೆಯಲ್ಲಿ ಕೇಳುತ್ತಿದ್ದರು. ನಾನು ಬೋರ್ಡ್ ಮೇಲೆ ಬರೆದಿದ್ದು ವಿದ್ಯಾರ್ಥಿಗಳಿಗೆ ಸಹಾಯವಾಗುತ್ತಿತ್ತು. ಮುಂದೆ ಅನೇಕ ಸಂಸ್ಥೆಗಳಲ್ಲಿ ಬಹುದೊಡ್ಡ ಹುದ್ದೆಗೇರಿದವರು ನನ್ನನ್ನು ನೋಡಿದಾಗಲೆಲ್ಲ ಆ ಡ್ರಾಯಿಂಗ್ ಬಗ್ಗೆ ಹೇಳುತ್ತ, ಅವು ಪ್ರಿಂಟ್ ಮಾಡಿದಂತೆಯೇ ಇರುತ್ತಿತ್ತೆಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ. (ಶೇಷಾದ್ರಿಪುರಂ ಕಾಲೇಜಿನ ಪೂರ್ವ ಡೇ ಪಿ ಕೃಷ್ಣ, ಹೆಚ್.ಎಂಟಿ.ಯಲ್ಲಿ ದೊಡ್ಡ ಹುದ್ದೆಯಲ್ಲಿರುವ ಹಲವರು ಹೀಗೆ ನೆನಪಾಗುತ್ತಾರೆ.)

**ಲಂಚ –ಋಷುವತ್ತುಗಳು, ದಬ್ಬಾಳಿಕೆ ಆಗ ತಮ್ಮ ಕಾಲೇಜಿನಲ್ಲಿಯೂ ನಡೆಯುತ್ತಿತ್ತೇ? ತಾವು ಹೇಗೆ ಪ್ರತಿಕ್ರಿಯಿಸುತ್ತಿದ್ದಿರಿ?**

ಯಾವುದೇ ವ್ಯಕ್ತಿ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದ್ದಲ್ಲಿ ಯಾರಿಗೂ ಮಣೆ ಹಾಕಬೇಕಿಲ್ಲ, ಹೆದರಬೇಕಿಲ್ಲ, ಓಲೈಸಬೇಕಿಲ್ಲ. ನನ್ನ ಶಿಕ್ಷಕ ವೃತ್ತಿಯಲ್ಲಿ ಸಹ ನಾನು ಹಾಗೆಯೇ ಇದ್ದೆ. ಅನ್ಯಾಯವನ್ನು ಧೈರ್ಯವಾಗಿ ಎದುರಿಸುತ್ತಿದ್ದೆ. ಒಮ್ಮೆ ಬೇರೆ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದವರು ನಮ್ಮ ಬಿ.ಎಂ.ಎಸ್.ಸಂಸ್ಥೆಗೆ ಪ್ರೊಫೆಸರ್ ಆಗಿ ನೇಮಕಗೊಂಡು ಬಂದರು. ಅವರು ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಬೇಕಾಗಿತ್ತು. ಅವರಿಗೆ ಎಲ್ಲರ ಮೇಲೆ ನಿಯಂತ್ರಣ ವಿಟ್ಟುಕೊಳ್ಳುವ ಆಸೆ. ಆಗಾಗ ಬೇರೆಯವರು ತರಗತಿ ತೆಗೆದು ಕೊಳ್ಳುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ಗಮನಿಸುತ್ತ, ಸುಳ್ಳು ಸುಳ್ಳೇ ಅವರು ತೆಗೆದುಕೊಳ್ಳುತ್ತಿಲ್ಲವೆಂದು ನೋಟೀಸ್ ಕಳುಹಿಸುತ್ತ, ಹೆದರಿಸಲು ಪ್ರಯತ್ನಿಸುತ್ತಿದ್ದರು. ಆದರೆ ಅವರಾರೂ ಪ್ರಿನ್ಸಿಪಾಲರಿಗೆ ದೂರುನೀಡಲು ಹಿಂಜರಿಯುತಿದ್ದರು. ಇದು ನನ್ನ ಗಮನಕ್ಕೂ ಬಂದಿತ್ತು. ನಾನು ಅವರಿಗೆಲ್ಲ ಆ ನೋಟೀಸಿಗೆ ಸರಿಯಾಗಿ ಉತ್ತರಿಸಲು ಹೇಳುತ್ತಿದ್ದೆ. ಆದರೆ ಪ್ರೊಫೆಸರ್ ಸೇರಿದಂತೆ ಎಲ್ಲರೂ ಪ್ರತಿಭಟಿಸಲು ಹೆದರುತ್ತಿದ್ದರು. ಒಮ್ಮೆ ನನಗೇ ಹೀಗೆ ಸುಳ್ಳು ನೋಟೀಸ್ ಕಳಿಸಿದರು. ನಾನು ಅದೇ ನೋಟೀಸಿನಲ್ಲಿ 'ದಿಸ್ ಸ್ಟೇಟ್ಮೆಂಟ್ ಈಸ್ ಕಂಪ್ಲೀಟ್ಲಿ ಫಾಲ್ಸ್' ಅಂತ ಬರೆದೆ. ಅದು ಪ್ರೊಫೆಸರ್ ವರೆಗೂ ತಲುಪಿತ್ತು. ಅವರೂ ಸಹ ಹಾಗೆಲ್ಲ ಬರೆಯ ಬಾರದೆಂದು ನನಗೇ ಹೇಳಿದ್ದರು. ಆದರೆ ನಾನು ನನ್ನ ಕ್ರಮವನ್ನು ಸಾಧಿಸಿಕೊಂಡಿದ್ದಲ್ಲದೆ, ಅದನ್ನು ಅಲ್ಲಿಗೇ ನಿಲ್ಲಿಸಬಾರದೆಂದು ನಿರ್ಧರಿಸಿದ್ದೆ. ಯಾರು ಯಾರ ಮೇಲೆ ಸುಳ್ಳು ಆಪಾದನೆ ಮಾಡಲಾಗಿತ್ತೋ ಅವರೆಲ್ಲರ ಹೆಸರುಗಳನ್ನು ಸಂಗ್ರಹಿಸಿದೆ. ಆಗ ಸನ್ಮಾನ್ಯ ಎಂ.ಎನ್.ವೆಂಕಟಾಚಲಯ್ಯನವರು ನಮ್ಮ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಲ್ಲಿ ಒಬ್ಬರಾಗಿದ್ದರು. ಆಗಿನ್ನೂ ಅವರು ವಕೀಲರು. ನಾನು ಅವರ ಬಳಿಗೆ ಹೋಗಿ ಎಲ್ಲ ವಿದ್ಯಮಾನಗಳನ್ನೂ ತಿಳಿಸಿ. ಕಾಲೇಜಿನ ಶೈಕ್ಷಣಿಕ ವಾತಾವರಣ ಕೆಡುತ್ತಿದೆಯೆಂದೂ, ಸತ್ಯಾ ಸತ್ಯತೆ ತಿಳಿಯಲು ಇತರರನ್ನೂ ಕೇಳಬಹುದೆಂದೂ ಹೇಳಿದೆ. ಆದರೆ ಅವರಿಗೆ ನನ್ನ ಮಾತಿನಲ್ಲಿ ಸಂಪೂರ್ಣ ವಿಶ್ವಾಸವಿತ್ತು. ಮುಂದಿನ ಗವರ್ನಿಂಗ್ ಕೌನ್ಸಿಲ್ ಸಭೆ ಸೇರಿದಾಗ ಆ ಪ್ರೊಫೆಸರ್‌ಗೆ ಮ್ಯಾನೇಜರ್ ಹುದ್ದೆಯನ್ನು ತೆಗೆದುಹಾಕಲಾಯಿತು. ನಂತರ ಕೂಡ ಅವರು ನನ್ನಲ್ಲಿ ತಪ್ಪು ಕಂಡುಹಿಡಿಯಲು ಯತ್ನಿಸಿದ್ದರು. ನಾವು ಬರೆಯಬೇಕಿದ್ದ ಮೂರು ಬಗೆಯ ರಿಜಿಸ್ಟರ್ ಗಳನ್ನು ಪರಿಶೀಲಿಸಲು ತರಿಸಿಕೊಂಡಿದ್ದರು. ನಾನು ಎಲ್ಲವನ್ನೂ ಕರಾರುವಾಕ್ಕಾಗಿ ಇಡುತ್ತಿದ್ದು, ಅವರಲ್ಲಿಗೆ ಕಳುಹಿಸುವಾಗ ಹೇಳಿದ್ದೆ, 'ಇವುಗಳ ಬಗ್ಗೆ ಒಂದೇ ಒಂದು ರಿಮಾರ್ಕ್ ಬರೆದರೆ ನಾನು ಸುಮ್ಮನೆ ಬಿಡುವುದಿಲ್ಲ,' ಒಂದು ವಾರ ಇಟ್ಟುಕೊಂಡಿದ್ದು ಅವುಗಳನ್ನು ಮರಳಿಸಿದ್ದರು. ಅವರಿಗೆ ಒಂದೇ ತಪ್ಪು ಸಿಕ್ಕಿರಲಿಲ್ಲ. ನಮ್ಮ ಪಾಲಿನ ಕರ್ತವ್ಯವನ್ನು ಸರಿಯಾಗಿ ಮಾಡಿದರೆ ಯಾರಿಗೂ ಹೆದರಬೇಕಿಲ್ಲ.

(ಮುಂದುವರೆಯುವುದು...)

# ರಕ್ಷಾಬಂಧನ : ಐತಿಹ್ಯ ಮತ್ತು ಮಹತ್ವ



**ಡಾ|| ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**

ಭಾರತದ ಭವ್ಯ ಇತಿಹಾಸಕ್ಕೆ ಅದರದ್ದೇ ಆದ ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿದೆ. ಹಿಂದೂ ಸಂಪ್ರದಾಯದಲ್ಲಿ ರಕ್ಷಾಬಂಧನಕ್ಕೆ ವಿಶೇಷ ಸ್ಥಾನಮಾನವಿದೆ. ಶ್ರಾವಣ ಮಾಸದ ಹುಣ್ಣಿಮೆಯ ದಿನ ರಕ್ಷಾಬಂಧನ ಆಚರಿಸಲಾಗುತ್ತದೆ. ಇದನ್ನು 'ರಾಖಿ' ಹಬ್ಬ ಎಂತಲೂ ಸಹ ಕರೆಯುತ್ತಾರೆ. ಹೆಸರೇ ಸೂಚಿಸುವಂತೆ ರಕ್ಷಾಬಂಧನವು ಮೂಲತಃ ಸಂಸ್ಕೃತ ಮೂಲದಿಂದ ಉತ್ಪತ್ತಿಯಾಗಿದೆ. 'ರಕ್ಷಾ' ಎಂದರೆ ರಕ್ಷಣೆ/ ಬಾಧ್ಯತೆ/ ಕಾಳಜಿ ಎಂಬರ್ಥಗಳಿವೆ. ಹಾಗೆಯೇ ಬಂಧನ ಎಂದರೆ ಸಂಬಂಧ ಎಂಬ ಅರ್ಥ ನೀಡಲಾಗಿದೆ. ಒಟ್ಟಾರೆ ಸಂಬಂಧದ ರಕ್ಷಣೆ ಮಾಡುವುದೇ ಈ ಹಬ್ಬದ ಆಶಯವಾಗಿದೆ. ಸಾಮಾನ್ಯಾಗಿ ಸಹೋದರಿ, ಸಹೋದರನ ಮಣಿಕಟ್ಟಿಗೆ ಕಟ್ಟುವ ಪವಿತ್ರ ದಾರವೇ ರಕ್ಷೆ ಅಥವಾ ರಾಖಿಯಾಗಿದೆ. ಸಾಂಕೇತಿಕವಾಗಿ ಸಹೋದರ ತನ್ನ ಸಹೋದರಿಯನ್ನು ಎಂತಹ ವಿಷಮ ಪರಿಸ್ಥಿತಿಯಲ್ಲೂ ರಕ್ಷಿಸುತ್ತೇನೆ ಎಂಬ ಸಂಕಲ್ಪ ಮಾಡುತ್ತಾನೆ. ಸಹೋದರಿಯಿಂದ ರಾಖಿ ಕಟ್ಟಿಸಿಕೊಂಡ ನಂತರ ಪ್ರತಿಯಾಗಿ ಆಕೆಯಿಂದ ಉಡುಗೊರೆ ಸ್ವೀಕರಿಸುತ್ತಾನೆ. ಹಾಗಾಗಿ ಸಹೋದರ ಮತ್ತು ಸಹೋದರಿಯರ ನಡುವಿನ ಪವಿತ್ರ ಬಾಂಧವ್ಯವನ್ನು ಜಗಜ್ಜಾಹಿರಗೊಳಿಸುವ ಹಬ್ಬವೇ ರಕ್ಷಾಬಂಧನ.

ಭ್ರಾತೃತ್ವವನ್ನು ಮತ್ತು ಅದರ ಮಹತ್ವವನ್ನು ಮೊದಲ ಬಾರಿ ಇಡೀ ಜಗತ್ತಿಗೆ ಕೊಟ್ಟದ್ದು ರಕ್ಷಾಬಂಧನ. ಇದು ನಮ್ಮ ನೆಲದ ಹಬ್ಬ. ನಮ್ಮ ಹಿರಿಮೆ– ಗರಿಮೆಯ ಹಬ್ಬ ಎನ್ನುವುದೇ ನಮಗೆಲ್ಲ ಗರ್ವವನ್ನು ನೀಡುವ ವಿಚಾರವಾಗಿದೆ. ಹಿಂದೂ ಜೀವನ ಕ್ರಮದಲ್ಲಿ ರಕ್ಷಾಬಂಧನಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿದೆ. ಹಿಂದೂ ಧರ್ಮದಲ್ಲಿನ ಇಂತಹ ಹಬ್ಬದ ಪರಿಕಲ್ಪನೆಯೇ ಒಂದು ಉತ್ಕೃಷ್ಟ ವಿಚಾರ ಧಾರೆಯನ್ನು ಅನಾವರಣಗೊಳಿಸುತ್ತದೆ. 'ವಸುದೈವ ಕುಟುಂಬಕಮ್', ಸರ್ವೆ ಜನೋ ಸುಖಿನೋ ಭವಂತು', ಜೀವಿಸು ಇತರರನ್ನು ಜೀವಿಸಲು ಬಿಡು ಎಂಬೆಲ್ಲ ಉದ್ಘೋಷಗಳ ಸಾರ್ಥಕ ಆಚರಣೆ ಎಂಬಂತೆ ರಕ್ಷಾಬಂಧನ ಹಿಂದೂ ಧರ್ಮದ ಸೊಗಸನ್ನು ಇಡೀ ಜಗತ್ತಿಗೆ ಪಸರಿಸಿದೆ. ಇಡೀ ಜಗತ್ತು ಎಂತಹ ವಿಪ್ಲವ ಸಂದರ್ಭಗಳನ್ನು ಎದುರಿಸಿದರೂ ಸಹ ಭಾರತದ ಇಂತಹ ಉತ್ಕೃಷ್ಟ ವಿಚಾರಧಾರೆಗಳು ಪ್ರತಿಯೊಬ್ಬರಲ್ಲೂ ಜೀವಂತಿಕೆಯ ಸೆಲೆಯನ್ನು ಸೂಜಿಗಲ್ಲಿನಂತೆ ಹಿಡಿದಿಟ್ಟಿವೆ. ಇದೇ ಭಾರತದ ಹಿಂದೂ ಧರ್ಮದ ಆಸ್ಮಿತೆ. ಇಡೀ ಜಗತ್ತಿಗೆ ಜೀವನಾಮೃತವನ್ನು ನೀಡಬಲ್ಲ ಏಕೈಕ ವಿಚಾರಧಾರೆಯ ಸಿದ್ಧಾಂತ, ಸಂಸ್ಕೃತಿ ಹಾಗೂ ಮೌಲ್ಯಗಳ ಸಂಗಮವೇ ಭಾರತ. ಆದ ಕಾರಣ ಈ ದೇವಭೂಮಿಯಲ್ಲಿ ಆಚರಣೆಗೆ ಬಂದ ಎಲ್ಲಾ ಹಬ್ಬಗಳು ಯಾವುದೇ ಸಂದರ್ಭದಲ್ಲೂ ಕಾಲನ ಕರೆಗೆ ನಿಲ್ಲದೆ ಅವಿಚ್ಛನ್ನವಾಗಿ ಆಚರಿಸಿಕೊಂಡು ಬರುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಭಾರತದ ಈ ರಕ್ಷಾಬಂಧನದ ಆಚರಣೆ ಕಾಲಾತೀತ ಮತ್ತು ದೇಶಾತೀತವಾದದ್ದು. ಭಾರತ, ನೇಪಾಳ ಹಾಗೂ ಸಾಗರೋತ್ತರ ಫಿಜಿಯಂತಹ ದೇಶಗಳಲ್ಲೂ ಆಚರಿಸಲಾಗುತ್ತಿದೆ.

ರಕ್ಷಾಬಂಧನದ ಹಬ್ಬಕ್ಕೆ ಅದರದ್ದೆ ಆದ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆಯಿದೆ. ಅನೇಕ ಪ್ರಸಂಗಗಳು ಪೌರಾಣಿಕ ಐತಿಹ್ಯವನ್ನು ಸಾರುತ್ತವೆ. ಕೆಲವೊಂದನ್ನು ಹೀಗೆ ಉದಾಹರಿಸಬಹುದು.

**ಪ್ರಸಂಗ – 01 :** ಶಿಶುಪಾಲನನ್ನು ಕೊಲ್ಲಲು ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರ ಬಳಸುವ ಸಂದರ್ಭದಲ್ಲಿ ಆತನ ಕೈ ಬೆರಳಿಗೆ ಗಾಯವಾಗುತ್ತದೆ. ಆಗ ಅಲ್ಲೆ ಇದ್ದ ದ್ರೌಪದಿ ತನ್ನ ಸೀರೆಯನ್ನು ಹರಿದು ಶ್ರೀಕೃಷ್ಣನ ಕೈ ಬೆರಳಿಗೆ ಕಟ್ಟುತ್ತಾಳೆ. ಇದಕ್ಕೆ ಪ್ರತಿಯಾಗಿ ಶ್ರೀ ಕೃಷ್ಣ ದ್ರೌಪದಿಯ ವಸ್ತ್ರಾಭರಣದ ಸಂದರ್ಭದಲ್ಲಿ ಸೀರೆಯನ್ನು ದಯಪಾಲಿಸಿ ದುಶ್ಯಾಶನಾದಿಯಾಗಿ ಎಲ್ಲಾ ಕೌರವರು ಹೈರಾಣು ಆಗುವಂತೆ ಮಾಡಿ ದ್ರೌಪದಿಯ ಮಾನ–ಮರ್ಯಾದೆ–ಘನತೆಯನ್ನು ಕಾಪಾಡುತ್ತಾನೆ. ಹೀಗೆ ದ್ರೌಪದಿಯನ್ನು ತನ್ನ ತಂಗಿಯಾಗಿ ಸ್ವೀಕರಿಸಿ ಆಕೆಯ ಮಾನಾಪಹಣವನ್ನು ತಡೆದು ಆಕೆಯನ್ನು ರಕ್ಷಿಸುತ್ತಾನೆ. ಆದ್ದರಿಂದಲೇ ರಾಖಿ ಕೇವಲ ದಾರವಲ್ಲ ಅಥವಾ ಬಟ್ಟೆಯ ತುಂಡಲ್ಲ ಅದೊಂದು ಭ್ರಾತೃತ್ವ ಸಾರುವ ಪವಿತ್ರ ಬೆಸುಗೆಯಾಗಿದೆ.

**ಪ್ರಸಂಗ – 02 :** ಭಗವಂತನಾದ ಗಣೇಶನಿಗೆ ಶುಭ ಮತ್ತು ಲಾಭ ಎಂಬ ಇಬ್ಬರು ಗಂಡು ಮಕ್ಕಳು. ರಕ್ಷಾಬಂಧನ ಆಚರಿಸಲು ತಮಗೆ ತಂಗಿ ಇಲ್ಲ ಎಂದು ಇಬ್ಬರು ಸಹೋದರರು ಹತಾಶರಾದರು. ಈ ವಿಚಾರವನ್ನು ತಮ್ಮ ತಂದೆಯಾದ ಗಣೇಶನಿಗೆ ಹೇಳಿದರೂ ಏನೂ ಪ್ರಯೋಜನವಾಗಲಿಲ್ಲ. ಆಗ ಅಲ್ಲಿಗೆ ಬಂದ ನಾರದ ಮಹರ್ಷಿಯನ್ನು ಪ್ರಾರ್ಥಿಸಿದರು. ಅವರು ಗಣೇಶನನ್ನು ಮನವೊಲಿಸಿದರು. ಆಗ ಗಣೇಶ ತನ್ನ ಪತ್ನಿಯರಾದ ರಿದ್ಧಿ ಮತ್ತು ಸಿದ್ಧಿಯರಲ್ಲಿ ವಿಚಾರ ತಿಳಿಸಿ, ಅವರಿಬ್ಬರಿಂದ ಹೊರಹೊಮ್ಮಿದ ದೈವಿಕ ಜ್ವಾಲೆಯಿಂದ 'ಸಂತೋಷ ಮಾ' ಎಂಬ ಮಗಳನ್ನು ಸೃಷ್ಟಿಸಿದರು. ತದನಂತರ ಶುಭ ಮತ್ತು ಲಾಭ ಸಹೋದರರು ತಮ್ಮ ಸಹೋದರಿಯಾದ ಸಂತೋಷ ಮಾ ಯಿಂದ ರಕ್ಷೆಯನ್ನು ಕಟ್ಟಿಸಿಕೊಂಡು ರಕ್ಷಾಬಂಧನವನ್ನು ಆಚರಿಸಿದರು.

**ಪ್ರಸಂಗ – 03:** ಅಸುರ ರಾಜ ಬಲಿಚಕ್ರವರ್ತಿ ಮಹಾವಿಷ್ಣುವಿನ ಪರಮ ಭಕ್ತನಾಗಿದ್ದ. ಒಮ್ಮೆ ಬಲಿಚಕ್ರವರ್ತಿ ಯಜ್ಞವನ್ನು ಮಾಡಿದ್ದನು. ಬಲಿ ಚಕ್ರವರ್ತಿಯನ್ನು ಪರೀಕ್ಷಿಸಲು ಮಹಾವಿಷ್ಣು ವಾಮನ ಅವತಾರ ತಾಳಿ, ಬಲಿಯ ಬಳಿ ಬಂದು ಮೂರು ವರಗಳನ್ನು ಕೇಳುತ್ತಾನೆ. ಮಹಾದಾನಿಯಾಗಿದ್ದ ಬಲಿ ಚಕ್ರವರ್ತಿ ವಿಪ್ರನ ಮಾತಿಗೆ ಕೊಡುತ್ತೇನೆಂದು ಹೇಳುತ್ತಾನೆ. ವಾಮನ ರೂಪದಲ್ಲಿದ್ದ ಮಹಾವಿಷ್ಣು ಮೊದಲನೆಯ ವರವಾಗಿ ಭೂಮಿಯನ್ನು ಕೇಳುತ್ತಾನೆ. ತಕ್ಷಣ ಬಲಿಚಕ್ರವರ್ತಿ ಇಡೀ ಭೂಮಿಯನ್ನು ವರವಾಗಿ ಪ್ರದಾನ ಮಾಡಿದಾಗ ವಾಮನ ರೂಪದಲ್ಲಿದ್ದು ಮಹಾವಿಷ್ಣು ತನ್ನ ಪಾದವನ್ನು ಸಂಪೂರ್ಣ ಭೂಮಿಯ ಮೇಲೆ ಇಟ್ಟನು. ಎರಡನೆಯ ವರವಾಗಿ ಆಕಾಶವನ್ನು ಕೇಳಿದಾಗ ಬಲಿ ಚಕ್ರವರ್ತಿ ಸಂತೋಷವಾಗಿ ಆಕಾಶವನ್ನು ನೀಡಿದಾಗ ಮಹಾವಿಷ್ಣು ತನ್ನ ಎರಡನೆಯ ಹೆಜ್ಜೆಯನ್ನು ಆಕಾಶದಲ್ಲಿರಿಸಿದನು. ಮೂರನೇ ವರವಾಗಿ ಯಾವುದನ್ನು ನೀಡಬೇಕು ಎಂದು ತೋಚದೆ ತನ್ನ ತಲೆ ಮೇಲೆ ನಿಮ್ಮ ಪಾದ ಇರಿಸಬಹುದು ಎಂದನು. ಆಗ ವಾಮನ ರೂಪದಲ್ಲಿದ್ದ ಮಹಾವಿಷ್ಣು ಬಲಿಯನ್ನು ಪಾತಾಳಕ್ಕೆ ತುಳಿದನು. ತದನಂತರ ಬಲಿಗೆ ವಾಮನ ರೂಪದಲ್ಲಿರುವ ವಿಪ್ರ ಮಹಾವಿಷ್ಣುವೆಂದು ತಿಳಿದಾಗ ಅತ್ಯಂತ ಭಕ್ತಿ ನಮ್ರತೆಯಿಂದ ಭಗವಂತ ನೀನು ಕೇಳಿದ ಎಲ್ಲವನ್ನು ದಾನ ನೀಡಿದ್ದೇನೆ. ಈ ನಿನ್ನ ಭಕ್ತನ ಕೋರಿಕೆಯಂತೆ ತಾವು ನನ್ನೊಂದಿಗೆ ಪಾತಾಳದಲ್ಲಿ ನೆಲಸಬೇಕೆಂದು ಪ್ರಾರ್ಥಿಸಿದ ಬಲಿ

ಪುಟ 8 ಕ್ಕೆ ➤

➤ ಪುಟ 7 ರಿಂದ.....

ಚಕ್ರವರ್ತಿಯ ಭಕ್ತಿಗೆ ಪ್ರಸನ್ನನಾದ ಮಹಾವಿಷ್ಣು ಪಾತಾಳದಲ್ಲೇ ನೆಲಸಿದನು. ಇದರಿಂದ ಚಿಂತಾಕ್ರಾಂತಳಾದ ಮಹಾಲಕ್ಷ್ಮಿ ಮಹಾವಿಷ್ಣುವನ್ನು ವೈಕುಂಠಕ್ಕೆ ಕರೆತರಬೇಕೆಂದು ತೀರ್ಮಾನಿಸಿ, ಒಬ್ಬ ಬಡಮಹಿಳೆಯ ರೂಪದಲ್ಲಿ ಬಲಿ ಚಕ್ರವರ್ತಿಯ ಹತ್ತಿರ ಹೋಗಿ ಆತನಿಗೆ ರಾಖಿ ಕಟ್ಟುತ್ತಾಳೆ. ಆಗ ದಾನ ನೀಡಲು ದಾನಶೂರನಾದ ಬಲಿ ಚಕ್ರವರ್ತಿ ತಾಯಿ ಈಗ ನನ್ನಲ್ಲಿ ಏನೂ ಉಳಿದಿಲ್ಲ ನಿನಗೆ ಯಾವ ದಾನ ನೀಡಲಿ ಎಂದನು. ಆಗ ಬಡ ಮಹಿಳೆಯ ರೂಪದಲ್ಲಿದ್ದ ಮಹಾಲಕ್ಷ್ಮಿ ಮಹಾವಿಷ್ಣುವನ್ನು ವೈಕುಂಠಕ್ಕೆ ಕಳುಹಿಸುವಂತೆ ಕೇಳಿಕೊಳ್ಳುತ್ತಾಳೆ. ಆಗ ಆಕೆಯ ಬೇಡಿಕೆಯನ್ನು ಪುರಸ್ಕರಿಸಿದ ಬಲಿ ಚಕ್ರವರ್ತಿ ಮಹಾ ವಿಷ್ಣುವನ್ನು ಪಾತಾಳದಿಂದ ವೈಕುಂಠಕ್ಕೆ ತೆರಳುವಂತೆ ಪ್ರಾರ್ಥಿಸುತ್ತಾನೆ. ಹೀಗೆ ಮಹಾವಿಷ್ಣು ಪಾತಾಳದಿಂದ ವೈಕುಂಠಕ್ಕೆ ತೆರಳಿದ್ದರ ಹಿನ್ನೆಲೆಯಾಗಿ ರಕ್ಷಾಬಂಧನವಿದೆ.

**ಪ್ರಸಂಗ–04:** ಭಾರತೀಯ ಪುರಾಣಗಳಲ್ಲಿ ಯಮುನಾ ನದಿಗೆ ವಿಶೇಷ ಸ್ಥಾನಮಾನವಿದೆ. ಭಗವಂತನಾದ ಶ್ರೀಕೃಷ್ಣನ ಬಾಲ್ಯದ ಎಲ್ಲಾ ಚಮತ್ಕಾರಗಳಿಗೆ ಯಮುನೆ ಸಾಕ್ಷಿಯಾಗಿದ್ದಾಳೆ. ಯಮುನೆ ಸಾವಿನ ಅದಿ ದೇವನಾದ ಯಮರಾಜನ ಸಹೋದರಿ ಯುಮುನೆ ತನ್ನ ಸಹೋದರನಾದ ಯಮಲೋಕದ ಅಧಿಪತಿಯಾದ ಯಮನಿಗೆ ರಕ್ಷಾಬಂಧನದ ಪವಿತ್ರ ದಿನ ರಕ್ಷೆಯನ್ನು ಕಟ್ಟುತ್ತಾಳೆ. ಇದರಿಂದ ಪ್ರಸನ್ನನಾದ ಯಮರಾಜ ತನ್ನ ಸಹೋದರಿಯಾದ ಯಮುನೆಗೆ ಅಮರತ್ವವನ್ನು ದಯಪಾಲಿಸುತ್ತಾನೆ.

**ಪ್ರಸಂಗ–05:** ದೇವಲೋಕದ ಅಧಿಪತಿಯಾದ ಇಂದ್ರನು ಅಸುರರಿಂದ ರಕ್ಷಣೆ ಪಡೆದುಕೊಳ್ಳಲು ಬೃಹಸ್ಪತಿಯ ಮಾತಿನಂತೆ ಪವಿತ್ರ ರಾಖಿಯನ್ನು ಕಟ್ಟಿಸಿಕೊಂಡು ರಕ್ಷಣೆ ಪಡೆದನೆಂದು ಪುರಾಣದಲ್ಲಿ ಉಲ್ಲೇಖವಾಗಿದೆ.

## ರಕ್ಷಾಬಂಧನಕ್ಕೆ ಇರುವ ಐತಿಹಾಸಿಕ ಐತಿಹ್ಯ

**ಪ್ರಸಂಗ – 01 :** ಕ್ರಿ.ಪೂ. 326ರಲ್ಲಿ ಗ್ರೀಕ್‌ನ ರಾಜ ಅಲೆಗ್ಸಾಂಡರ್ ಜಗತ್ತನ್ನು ಗೆಲ್ಲುವ ಮಹಾತ್ವಕಾಂಕ್ಷೆಯೊಂದಿಗೆ ಅಪಾರ ಸೈನ್ಯದೊಂದಿಗೆ ಭಾರತದ ಮೇಲೆ ದಂಡೆತ್ತಿ ಬಂದನು. ಜಿಲಂ ನದಿಯ ಉತ್ತರ ದಡದಲ್ಲಿ ಬೀಡುಬಿಟ್ಟನು. ಅಂದಿನ ದಿನಮಾನಗಳಲ್ಲಿ ಭಾರತದ ಆ ಭೂ ಪ್ರದೇಶವನ್ನು ಪೊರಾಸ್ ರಾಜ ಆಳ್ವಿಕೆ ಮಾಡುತ್ತಿದ್ದ. ಅಲೆಗ್ಸಾಂಡರ್ ತನ್ನ ಹದಿನೈದು ವರ್ಷಗಳ ನಿರಂತರ ಯುದ್ಧಗಳಲ್ಲಿ ಸೋತಿದ್ದೆ ಇಲ್ಲ. ಆದರೆ ಆತನ ಪರಾಕ್ರಮ ಭಾರತದ ರಾಜನಾದ ಪೊರಾಸ್ ಮುಂದೆ ನಿಲುಕಲಿಲ್ಲ. ಪೋರಾಸ್ ಎದುರು ಪ್ರಥಮವಾಗಿ ಅಲೆಗ್ಸಾಂಡರ್ ಸೋಲನ್ನು ಒಪ್ಪಿಕೊಂಡನು. ಈ ಸಂದರ್ಭದಲ್ಲಿ ಅಲೆಗ್ಸಾಂಡರ್‌ನ ಪತ್ನಿ ರೋಕ್ಸಾನಾ ಪೋರಸ್ ರಾಜನಿಗೆ ರಾಖಿ ಕಳುಹಿಸಿಕೊಟ್ಟಳು. ಇದೊಂದೇ ಕಾರಣಕ್ಕೆ ಯುದ್ಧದಲ್ಲಿ ಪರಾಭವಗೊಂಡ ಅಲೆಗ್ಸಾಂಡರ್‌ನಿಗೆ ಪೋರಸ್ ಜೀವಭಿಕ್ಷೆ ನೀಡಿ ಆತನನ್ನು ಕೊಲ್ಲದೆ ಬಿಟ್ಟನು. ಇದು ರಕ್ಷಾಬಂಧನದ ಮಹತ್ವ, ಇಡೀ ವಿಶ್ವವನ್ನೇ ತಮ್ಮ ಕುಟುಂಬದಂತೆ ಪರಿಪಾಲಿಸುವ ಭಾರತೀಯತೆಯ ದೃಷ್ಟಿಕೋನಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಮತ್ತೊಂದಿಲ್ಲ.

**ಪ್ರಸಂಗ – 02:** ಮಧ್ಯಕಾಲೀನ ಭಾರತದ ಇತಿಹಾಸ ರಜಪೂತ ಮತ್ತು ಮುಸಲ್ಮಾನರ ಸಂಘರ್ಷದ ಯುಗವೆಂದೆ ಇತಿಹಾಸದಲ್ಲಿ ಉಲ್ಲೇಖವಾಗಿದೆ.

ಮೇವಾರ ಪ್ರಾಂತ್ಯದ ರಾಜನಾದ ಮಹಾರಾಣಾ ಸಂಗ್ರಾಮ ಸಿಂಗ್‌ನು ಕಾನ್ವ ಯುದ್ದದಲ್ಲಿ ಅಸುನೀಗಿದ ನಂತರ ಈತನ ಧರ್ಮ ಪತ್ನಿ ರಾಣಿ ಕರ್ಣಾವತಿ ಅಧಿಕಾರ ವಹಿಸಿಕೊಂಡು ರಾಜ್ಯಭಾರ ಮಾಡುತ್ತಾಳೆ. ಈ ಸಂದರ್ಭದಲ್ಲಿ ಗುಜರಾತಿನ ಸುಲ್ತಾನನಾದ ಬಹುದ್ದೂರ್ ಷಾ ಮೇವಾರ ಪ್ರಾಂತ್ಯದ ಚಿತ್ತೂರಿನ ಮೇಲೆ ಆಕ್ರಮಣ ಮಾಡಲು ಸಜ್ಜಾದಾಗ ರಾಣಿ ಕರ್ಣಾವತಿ ಮೊಗಲ್ ದೊರೆ ಹುಮಾಯೂನ್‌ಗೆ ರಕ್ಷಾಬಂಧನವನ್ನು ಕಳುಹಿಸಿಕೊಡುತ್ತಾಳೆ. ಬಂಗಾಲದ ಕಡೆ ದಂಡೆತ್ತಿ ಹೋಗಿದ್ದ ಹುಮಾಯೂನ್‌ಗೆ ರಾಖಿ ತಲುಪಿದ ತಕ್ಷಣ ಆತ ತನ್ನ ದಂಡಯಾತ್ರೆಯನ್ನು ಸ್ಥಗಿತಗೊಳಿಸಿ ಸಹೋದರಿಯಾದ ರಾಣಿ ಕರ್ಣಾವತಿಯ ಸಹಾಯಕ್ಕೆ ಧಾವಿಸುವಷ್ಟರಲ್ಲಿ ಬಹೂದ್ದೂರ್ ಷಾ ಆಕ್ರಮಣ ಮಾಡಿ ಚಿತ್ತೂರನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ರಾಜಪೂತ ವೀರ ಮಹಿಳೆಯಾದ ರಾಣಿ ಕರ್ಣಾವತಿ ಇತರೆ ರಜಪೂತ ಮಹಿಳೆಯರೊಂದಿಗೆ ಜೌಹರ್ (ಬೆಂಕಿಗೆ ಹಾಕುವುದು) ಗೆ ತಮ್ಮನ್ನು ತಾವು ಸಮರ್ಪಿಸಿಕೊಂಡು ಈ ನೆಲದ ಅಸ್ಮಿತೆಯನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. "ಮಾನಕ್ಕೆ ಅಂಜುತ್ತೇವೆಯೋ ಹೊರತು ಪ್ರಾಣಕ್ಕಲ್ಲ" ಎಂಬುದು ಈ ವೀರವನಿತೆಯರ ಬದುಕಿನ ಮಂತ್ರ. ಇದೊಂದು ದಂತ ಕಥೆಯಾದರೂ ಸಹ ಇದರ ಸಂದೇಶ ಮಾತ್ರ ಮೌಲ್ಯಯುತವಾದದ್ದು ರಕ್ಷಾಬಂಧನಕ್ಕೆ ಯಾವುದೇ ಜಾತಿ, ಧರ್ಮ, ಅಂತಸ್ತು, ಸಾಮಾಜಿಕ ಸ್ಥಾನಮಾನ ಎಂಬೆಲ್ಲ ಸಂಕುಚಿತ ಗಡಿಗಳಿಲ್ಲ. ಇದು ರಕ್ಷಾಬಂಧನದ ವಿಶೇಷತೆಯೇ ಆಗಿದೆ.

**ಪ್ರಸಂಗ–03:** ಕ್ರಿ.ಶ. 1905 ರಲ್ಲಿ ನಡೆದ ಬಂಗಾಲದ ವಿಭಜನೆ ಭಾರತದ ಇತಿಹಾಸದಲ್ಲಿ ಅತ್ಯಂತ ಕರಾಳ ದಿನವೆಂದೇ ಭಾವಿಸಲಾಗಿದೆ. ಬಂಗಾಲದ ವಿಭಜನೆ ಶ್ರಾವಣ ಮಾಸದಲ್ಲೇ ಬಂದದ್ದು ವಿಪರ್ಯಾಸವೇ ಸರಿ! ಆಗ ರವೀಂದ್ರನಾಥ ಠಾಕೂರ್ ಹಿಂದೂ– ಮುಸ್ಲಿಂರ ನಡುವಿನ ಬಾಂಧವ್ಯ ಮತ್ತು ಏಕತೆಯನ್ನು ಬ್ರಿಟೀಷರಿಗೆ ಮನವರಿಕೆ ಮಾಡುವ ಸಲುವಾಗಿ ರಾಖಿ ಹಬ್ಬವನ್ನು ಹಿಂದೂ–ಮುಸ್ಲಿಂರ ನಡುವೆ ಆಚರಿಸುವಂತೆ ಮಾಡಿದ್ದು ಇತಿಹಾಸದ ಬಹುದೊಡ್ಡ ಕ್ರಾಂತಿಯೇ ಆಗಿದೆ. ಆದ್ದರಿಂದ ರಕ್ಷಾಬಂಧನಕ್ಕೆ ಯಾವುದೇ ಮತಿಯ ಅಡ್ಡಗೋಡೆ ಗಳಿಲ್ಲ. ಎಲ್ಲಾ ಮತಗಳ ಸೀಮೋಲ್ಲಂಘನೆ ಮಾಡಿರುವ ಭಾರತೀಯ ಹಬ್ಬ ಯಾವುದಾದರೂ ಇದ್ದರೆ ಅದು ರಕ್ಷಾಬಂಧನ ಮಾತ್ರ!

## ರಕ್ಷಾಬಂಧನದ ಪ್ರಸ್ತುತತೆ

ರಕ್ಷಾಬಂಧನದ ಐತಿಹ್ಯ ಮತ್ತು ಮಹತ್ವವನ್ನು ಇಂದಿನ ಪೀಳಿಗೆಯ ಪ್ರತಿಯೊಬ್ಬ ಭಾರತೀಯರು ತಿಳಿಯುವ ಅವಶ್ಯಕತೆಯಿದೆ. ರಕ್ಷಾಬಂಧನದ ಆಚರಣೆ ಪ್ರತಿಯೊಬ್ಬ ಭಾರತೀಯ ತನ್ನ ತನು–ಮನ ಸಮರ್ಪಣೆಯ ಸಂಕಲ್ಪದೊಂದಿಗೆ ಆಚರಿಸಬೇಕು. ಪ್ರಸಕ್ತ ಭಾರತೀಯ ಸಮಾಜದ ಹಲವಾರು ಸಮಸ್ಯೆಗಳಿಗೆ ರಕ್ಷಾಬಂಧನ ಔಷಧಿಯಂತೆ ವರದಾನವಾಗಿದೆ. ಮಾನವರೆಲ್ಲರು ಒಂದು, ಪ್ರತಿಯೊಬ್ಬರನ್ನು ಗೌರವಿಸಬೇಕು, ಪ್ರತಿಯೊಬ್ಬರಿಗೂ ರಕ್ಷಣೆಯ ಅವಶ್ಯಕತೆಯಿದೆ, ಸಮಾಜದಲ್ಲಿ ಎಲ್ಲರೂ ಗೌರವಯುತವಾಗಿ, ಸಂಘರ್ಷ ಮುಕ್ತವಾಗಿ ಬದುಕಬೇಕೆಂಬುದು ರಕ್ಷಾಬಂಧನ ಆಶಯವಾಗಿದೆ. ಜಾತಿ, ಮತ, ಧರ್ಮ ಮತ್ತು ಅಂತಸ್ತುಗಳೆಂಬ ಮಾನವ ನಿರ್ಮಿತ ಗಡಿಗಳನ್ನು ದಾಟಿ ವಿಶ್ವಮಾನವರಾಗಬೇಕೆಂಬುದೇ ರಕ್ಷಾಬಂಧನದ ಆಶಯವಾಗಿದೆ. ರಾಷ್ಟ್ರದ ಶಿಕ್ಷಣ ವ್ಯವಸ್ಥೆಯ ಎಲ್ಲಾ ಹಂತಗಳಲ್ಲೂ ರಾಖಿ ಹಬ್ಬದ ಮಹತ್ವವನ್ನು ಸಾರುವ ವಿಷಯಗಳನ್ನು ತಂದು ಆ ಮೂಲಕ ಪ್ರತಿ ವಿದ್ಯಾರ್ಥಿಗಳಲ್ಲಿ ಸಾಮರಸ್ಯ ಮತ್ತು ಸಹೋದರತ್ವ ಭಾವನೆ ತಂದದ್ದೆ ಆದರೆ ಭಾರತವನ್ನು ಮತ್ತೊಮ್ಮೆ ಮಹಾನ್ ರಾಷ್ಟ್ರವಾಗಿ ಮಾಡುವಲ್ಲಿ ಯಾವುದೇ ಅನುಮಾನಗಳಿಲ್ಲ?

ಶಾಲೆಗಳಲ್ಲಿ ಶಿಕ್ಷಕರು, ಮನೆಗಳಲ್ಲಿ ಹಿರಿಯರು, ಸಮಾಜದ ಗೌರವಾನ್ವಿತ ವ್ಯಕ್ತಿಗಳು ಇಂತಹ ಹಬ್ಬಗಳನ್ನು ಹೆಚ್ಚು ಹೆಚ್ಚು ಆಚರಿಸುವ ಆಸ್ಥೆ ತೋರಬೇಕು. ಯಾವುದೇ 'ಬದಲಾವಣೆ' ಅಥವಾ 'ಕ್ರಾಂತಿ' ತಕ್ಷಣ ನಡೆಯುವಂತದ್ದಲ್ಲ. ಅದಕ್ಕೆ ಸಮಯದ ಅವಶ್ಯಕತೆ ಇದೆ.

ರಾಷ್ಟ್ರಕವಿ ಕುವೆಂಪುರವರ ಆಶಯದಂತೆ ಭಾರತೀಯ ಸಮಾಜವನ್ನು ಸರ್ವ ಜನಾಂಗೀಯ ಶಾಂತಿಯ ತೋಟವನ್ನಾಗಿ ಮಾಡುವಲ್ಲಿ ರಕ್ಷಾಬಂಧನ ಆಚರಣೆ ಅವಶ್ಯವಾಗಿ ಪ್ರತಿಯೊಬ್ಬ ಭಾರತೀಯನ ಮನೆ– ಮನಗಳಲ್ಲಿ ಆಚರಿಸಬೇಕಾಗುತ್ತದೆ. ●

# ಭಾರತೀಯ ಇತಿಹಾಸದ ವಿಕೃತೀಕರಣ

## ಭಾರತದ ಜನರನ್ನು ಹಿಂಸೆಯಿಂದ ಬಗ್ಗುಬಡೆಯುವುದು

ಆಂಗ್ಲರು ಉದ್ದೇಶಪೂರ್ವಕವಾಗಿ ಭಾರತದ ಕೆಲವು ಭಾಗಗಲ್ಲಿ ಬರಗಾಲವನ್ನು ಸೃಷ್ಟಿಸಿ ಸಹಸ್ರಾರು ಜನ ಆಹಾರ, ನೀರು ಇಲ್ಲದೆ ಸಾವಿಗೀಡಾಗುವಂತೆ ಮಾಡಿದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಆಂಗ್ಲರ ದಬ್ಬಾಳಿಕೆಯಿಂದ ಪ್ರಾಣ ಕಳೆದುಕೊಂಡವರ ವಿವರಗಳನ್ನು ಆಂಗ್ಲರು ಎಲ್ಲೂ ದಾಖಲಿಸಿಲ್ಲ. ಆದರೆ ಅನೇಕರು ಸಂಶೋಧನೆ ಮಾಡಿ 1857 ರಿಂದ 1947ರವರೆಗೆ ಆಂಗ್ಲರ ಹಿಂಸಾಚಾರಕ್ಕೆ ಒಳಗಾಗಿ ಪ್ರಾಣಕಳೆದುಕೊಂಡವರ ಸಂಖ್ಯೆ ಮೂರು ಲಕ್ಷಕ್ಕೂ ಮೀರಿದೆ ಎಂದು ಅಂದಾಜು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯವು ಅಹಿಂಸಾ ಹೋರಾಟದಿಂದ ಪ್ರಾಪ್ತವಾಗಿದೆ ಎಂಬ ಕಲ್ಪನೆ ವಾಸ್ತವವೇ?

## ಶಿಕ್ಷಣದಲ್ಲಿ ವಿಕೃತೀಕರಣ

ಭಾರತದಲ್ಲಿ ಆಂಗ್ಲ ಸರ್ಕಾರವು ರಚಿಸಿದ್ದ ಸಾರ್ವಜನಿಕ ಶಿಕ್ಷಣ ಬೋರ್ಡ್‌ನ ಅಧ್ಯಕ್ಷರಾಗಿದ್ದ ಥಾಮಸ್ ಬ್ಯಾಬಿಂಗ್‌ಟನ್ ಮೆಕಾಲೆಗೆ ಶಿಕ್ಷಣವನ್ನು ಆಂಗ್ಲರ ಅನುಕೂಲಕ್ಕೆ ತಕ್ಕಂತೆ ಬದಲಾವಣೆ ಮಾಡುವ ಜವಾಬ್ದಾರಿಯನ್ನು ವಹಿಸಲಾಯಿತು. ಮೆಕಾಲೆ, ಶಿಕ್ಷಣದಲ್ಲಿ ತಾನು ತರುವ ಬದಲಾವಣೆಗಳ ಉದ್ದೇಶವನ್ನು ಕೆಳಗಿನಂತೆ ಸ್ಪಷ್ಟವಾಗಿ ತಿಳಿಸಿದ್ದಾನೆ:

"ನಮಗಿರುವ ಸೀಮಿತಿ ಸಂಪನ್ಮೂಲಗಳ ಮೂಲಕ ಭಾರತದ ಎಲ್ಲಾ ಜನರಿಗೆ ನಮ್ಮ ಶಿಕ್ಷಣವನ್ನು ಕೊಡುವುದು ಅಸಾಧ್ಯ. ಆದ್ದರಿಂದ ಈಗ ನಾವು ಯೋಚಿಸಬೇಕಾಗಿರುವುದು ನಮ್ಮ ವಿಚಾರಗಳನ್ನು ಕೋಟ್ಯಾಂತರ ಜನಗರಿಗೆ ಮುಟ್ಟಿಸುವ ಮಧ್ಯವರ್ತಿ ಭಾಷ್ಯಾಕಾರರ ಒಂದು ವರ್ಗವನ್ನು ತಯಾರಿಸುವುದು. ಅವರು ರಕ್ತ ಮತ್ತು ಬಣ್ಣದಲ್ಲಿ ಮಾತ್ರ ಭಾರತೀಯರಾಗಿದ್ದು, ಅವರ ಅಭಿರುಚಿ, ಅಭಿಪ್ರಾಯ, ನೀತಿಗಳು ಮತ್ತು ಬುದ್ಧಿ, ಪ್ರಜ್ಞೆ ಎಲ್ಲವೂ ಆಂಗ್ಲವಾಗಿಡಬೇಕು". ಭಾರತದ ಜನರನ್ನು ಕರಿಬಣ್ಣದ ಆಂಗ್ಲರನ್ನಾಗಿ ಪರಿವರ್ತಿಸುವ ದೃಷ್ಟಿಯಿಂದ ಅವನ ಉದ್ದೇಶ ಸಾಕಷ್ಟು ಫಲಿಸಿರುವುದು ಈಗ ನಮಗೆ ಅನುಭವಕ್ಕೆ ಬರುತ್ತಿದೆ. ವಿಶೇಷವಾಗಿ ವಸಾಹತುಷಾಯಿಯನ್ನು ವಿರೋಧಿಸುತ್ತೇವೆ ಎಂದು ಜನರನ್ನು ಮೊಬ್ಬುಗೊಳಿಸಲು ಯತ್ನಿಸಿದ ವಾಮಪಂಥೀಯರು, ವಿಕೃತ ಬುದ್ಧಿಜೀವಿಗಳು ಹಾಗೂ ಭಾರತದ ರಾಷ್ಟ್ರೀಯತೆಯ ವಿರೋಧಿಗಳು ಆಂಗ್ಲರ ವಾರಸುದಾರರಾಗಿ ಕರಿಬಣ್ಣದ ಆಂಗ್ಲರಂತೆ ವರ್ತಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ.

## ಆಂಗ್ಲರಿಂದ ನಡೆದ ಇತಿಹಾಸದ ವಿಕೃತಿಗಳು

ಈ ಉದ್ದೇಶವನ್ನು ಹೊತ್ತು 1835ರಲ್ಲಿ ಟಿ.ಬಿ ಮೆಕಾಲೆ ನೇತೃತ್ವದಲ್ಲಿ ಆಂಗ್ಲರು ತಮ್ಮ ಹೊಸ ಶಿಕ್ಷಣ ನೀತಿಯನ್ನೇ ರೂಪಿಸಿದರು. ಇವರ ಸಂಚನ್ನು ಕಾರ್ಯಗತಗೊಳಿಸಲು ಅವರು ಮಾಡಿದ ಕೆಲವು ಪ್ರಯತ್ನಗಳು ಕೇವಲ ಸಂಕ್ಷಿಪ್ತ ರೂಪದಲ್ಲಿ ಕೆಳಗಿನಂತಿವೆ.

**1.** ಮೊದಲನೆಯದಾಗಿ ಆಂಗ್ಲರು ಭಾರತದ ಹೆಸರನ್ನು 'ಇಂಡಿಯಾ' ಎಂದು ಬದಲಿಸಿದರು. ನಮಗೆ ಸ್ವಾಭಾವಿಕವಾಗಿ 'ಭಾರತ' ಎಂಬ ಹೆಸರಿನ ಬಗ್ಗೆ ಭಾವನಾತ್ಮಕ ಬಾಂಧವ್ಯ 'ಇಂಡಿಯಾ' ಪದಕ್ಕೆ ಬರುವುದಿಲ್ಲ. " ಭಾರತ ಮಾತಾಕೀ ಜೈ" ಎಂದರೆ ನಮ್ಮ ಹೃದಯದಲ್ಲಿ ಮಿಡಿಯುವ ಭಾವನೆ " ಇಂಡಿಯಾ ಮಾತಾ ಕೀ ಜೈ" ಎಂದರೆ ಖಂಡಿತಾ ನಮ್ಮ ಹೃದಯ ಮಿಡಿಯುವುದಿಲ್ಲ. ಭಾರತದೊಡನೆ ಭಾವನಾತ್ಮಕ ಬಾಂಧವ್ಯಗಳನ್ನು ಕಡಿದು ಹಾಕಲು ಮಾಡಿದ ಅನೇಕ ಪ್ರಯತ್ನಗಳ ಪೈಕಿ ಇದೊಂದು ಉದಾಹರಣೆ ಮಾತ್ರ.

**2.** ಆಂಗ್ಲರು ಸೃಷ್ಟಿಸಿದ ಇನ್ನೊಂದು ಸುಳ್ಳು ಎಂದರೆ ಆಂಗ್ಲರ ಆಗಮನಕ್ಕೆ ಮುಂಚೆ ಭಾರತದ ಜನ ಕ್ರೂರಿಗಳು, ಸೊಕ್ಕಿನವರು, ಹೃದಯಹೀನರು ಮತ್ತು ಅನಾಗರೀಕರಾಗಿದ್ದರು. ವಿಜ್ಞಾನ, ತಂತ್ರಜ್ಞಾನಗಳ ಗಂಧವೇ ಇಲ್ಲದ ಈ ಜನರಿಗೆ ವಿಜ್ಞಾನ ತಂತ್ರಜ್ಞಾನಗಳನ್ನು ಪರಿಚಯಿಸಿದವರು ಆಂಗ್ಲರೇ. ಈ ರೀತಿ ಇವರನ್ನು ನಾಗರೀಕರನ್ನಾಗಿ ಮಾಡುವ ಹೊಣೆ ಬಿಳಿ ಜನರ ಮೇಲೆ ಬಿದ್ದಿದೆ (It is a white man's burden). ಆಂಗ್ಲರು ಭಾರತಕ್ಕೆ ಬಂದಿರುವುದೊಂದು ದೈವೀಕೃಪೆ (It is a divine dispensation). ಆಂಗ್ಲರು ಭಾರತದ ಅನಾಗರೀಕ ಜನಗಳ ಉದ್ಧಾರಕ್ಕೇ ಇಲ್ಲಿಗೆ ಬಂದಿರುವುದು ಇತ್ಯಾದಿ. ಭಾರತದ ಜನರಲ್ಲಿ ಈ ರೀತಿ ಕೀಳರಿಮೆಯನ್ನು ಸೃಷ್ಟಿಸುವುದು ಆಂಗ್ಲರ ಗುರಿ ಆಯಿತು ಹಾಗೂ ಆಂಗ್ಲರು ಕಲಿಸುವವರು, ನಾವು ಕಲಿಯುವವರು; ಆಂಗ್ಲರು ಜ್ಞಾನಿಗಳು, ನಾವು ಅಜ್ಞಾನಿಗಳು; ಆಂಗ್ಲರು ಕೊಡುವವರು, ನಾವು ತೆಗೆದುಕೊಳ್ಳುವವರು; ಎಂಬ ಆತ್ಮ ಹೀನಾಯವನ್ನು ನಮ್ಮ ಜನರಲ್ಲಿ ನಿರ್ಮಿಸಲು ಯತ್ನಿಸಿದರು.

**3.** ಭಾರತದ ಪರಂಪರಾಗತ ಜ್ಞಾನ, ವಿಜ್ಞಾನ ತಂತ್ರಜ್ಞಾನ, ಅನ್ಯಾನ್ಯ ಶಾಸ್ತ್ರಗಳು ಇತ್ಯಾದಿ ಲಿಖಿತ ರೂಪದಲ್ಲಿ ಸಂಸ್ಕೃತ ಭಾಷೆಯಲ್ಲಿವೆ. ಸಂಸ್ಕೃತ ಜೀವಂತವಿದ್ದರೆ ಮೇಲಿನ ಸಾಧನೆಗಳನ್ನು ಅರಿಯಲು ಸಂಸ್ಕೃತ ಒಂದು ಕೊಂಡಿಯಾಗಿಬಿಡುತ್ತದೆ ಎಂಬ ಕಾರಣದಿಂದ ಸಂಸ್ಕೃತದ ಬಗ್ಗೆ ತಿರಸ್ಕಾರ ಮತ್ತು ಮರೆವುಗಳನ್ನು ತರಲು ಆಂಗ್ಲರು ವಿಶೇಷ ಪ್ರಯತ್ನ ಹಾಕಿದರು. ಸಂಸ್ಕೃತವನ್ನು 'ಮೃತ ಭಾಷೆ' ಎಂದು ಪ್ರಚಾರ ಮಾಡಿದರು. ಒಡೆದು ಆಳುವ ಅವರ ನೀತಿಯ ಪ್ರಕಾರ ಸಂಸ್ಕೃತ ಮೇಲ್ವರ್ಗದ ಭಾಷೆ ಎಂದು ಅಪಪ್ರಚಾರ ಮಾಡಿದರು. ವಾಸ್ತವಿಕವಾಗಿ ಮಹಾಭಾರತ ಬರೆದ ವ್ಯಾಸರು ಬೆಸ್ತರು, ರಾಮಾಯಣ ರಚಿಸಿದ ವಾಲ್ಮೀಕಿ ಬೇಡರು, ಮಹಾಕಾವ್ಯಗಳನ್ನು ರಚಿಸಿದ ಕಾಳಿದಾಸ ಕುರುಬರು. ಈ ರೀತಿ ಸಂಸ್ಕೃತದ ಮೂಲ ಸಾಹಿತ್ಯಗಳ ನಿರ್ಮಾತೃಗಳಾದರೂ ಆಂಗ್ಲರು ವಿಂಗಡಿಸಿರುವಂತೆ ತಥಾಕಥಿತ ಮೇಲ್ವರ್ಗಕ್ಕೆ ಸೇರಿದವರೆ ಅಲ್ಲ. ಇಷ್ಟಾಗಿಯೂ ಆಂಗ್ಲರು ದುರುದ್ದೇಶಿತ ಪ್ರಚಾರವನ್ನು ಮಾಡಿ ಆಂಗ್ಲ ಭಾಷೆಗೆ ಪ್ರತಿಷ್ಠೆ ನಿರ್ಮಿಸಿ ಅದರ ಬಗ್ಗೆ ವ್ಯಾಮೋಹ ನಿರ್ಮಿಸಲು ಕ್ರಮಗಳನ್ನು ತೆಗೆದುಕೊಂಡರು.

ಸಂಸ್ಕೃತ ಹಾಗೂ ದೇಶಿಯ ಅನ್ಯ ಭಾಷೆಗಳ ಬಗ್ಗೆ ಆಂಗ್ಲರು ಪ್ರಚಾರ ಮಾಡಿರುವ ಕೆಲವು ಅಂಶಗಳನ್ನು ಗಮನಿಸಿ– "ಸಂಸ್ಕೃತ ಭಾಷೆ ಅನುಪಯೋಗಿ, ಇದಕ್ಕೆ ಖರ್ಚು ಮಾಡುವುದನ್ನು ನಿಲ್ಲಿಸಬೇಕು", "ಇಲ್ಲಿನ ಸ್ಥಾನೀಯ ಭಾಷೆಗಳಲ್ಲಿ ಬೌದ್ಧಿಕ ಬೆಳವಣಿಗೆಗೆ ಬೇಕಾದ ಭಾಷಾ ಸಂಪತ್ತೇ ಇಲ್ಲ", "ಇಲ್ಲಿನ ಭಾಷೆಗಳೆಲ್ಲಾ ಅನಾಗರಿಕ ಒರಟು ಭಾಷೆಗಳು", "ಉನ್ನತ ಅಭ್ಯಾಸಕ್ಕೆ ಈ ಭಾಷೆಗಳು ಉಪಯೋಗಕ್ಕೆ ಬರುವುದಿಲ್ಲ", "ಯುರೋಪಿನ ಪುಸ್ತಕ ಭಂಡಾರದ ಒಂದು

ಪುಟ 10 ಕ್ಕೆ ➤

ದೇವರಂತೆ ನಿಮ್ಮ ಗುರುವನ್ನು ಪೂಜಿಸಿ, ಆದರೆ ವಿಮರ್ಶೆ ಮಾಡದೆ ಅವರ ಮಾತನ್ನು ಕೇಳಬೇಡಿ – ಸ್ವಾಮಿ ವಿವೇಕಾನಂದ

➢ ಪುಟ 3 ರಿಂದ.....

ಆಪ್ಯಾಯಮಾನ, ಆದರಣೀಯ ಮತ್ತು ಸೆಕ್ಯುಲರ್. ಸ್ವಾತಂತ್ರ್ಯಾ ನಂತರದ 67 ವರ್ಷಗಳ ಕಾಲ ಈ ವಿಚಾರವನ್ನು ಪೋಷಿಸಿಕೊಂಡು ಬಂದಿದ್ದು ಹಿರಿಯ ರಾಜಕಾರಣಿಯಿಂದ ಪುಡಿ ರಾಜಕಾರಣಿಯವರೆಗೆ ಇದನ್ನೇ ಪಾಲಿಸುತ್ತಿರುವುದು ಸ್ಟಾಲಿನ್, ಅವನ ಕುಡಿ, ಮುಲಯಂ, ಲಾಲೂ ಅವರ ಕುಡಿಗಳು, ರಾಹುಲ್, ಪಿಣರಾಯ್, ಮಮತಾ ಇದೇ ರಾಗವನ್ನು ಹಾಡುತ್ತಿರುವುದು. ಹೀಗಾಗಿಯೇ ರಾಹುಲ್ ವಯನಾಡಿನಲ್ಲಿ ಗೆಲ್ಲುವುದು, ಮಮತಾ ನಿರಂತರವಾಗಿ ಆಳುತ್ತಿರುವುದು, ತಮಿಳುನಾಡಿನಲ್ಲಿ ಹಿಂದೂದ್ವೇಷಿ ಸರ್ಕಾರಇರುವುದು.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಂತೂ ಈ ತುಷ್ಟೀಕರಣ ಎದ್ದು ಕಾಣುತ್ತಿತ್ತು. ಉದಯನಿಧಿ ಸ್ಟಾಲಿನ್ ಸನಾತನ ಸಂಸ್ಕೃತಿಯನ್ನು ಕ್ಯಾನ್ಸರ್ ಹಾಗೂ ಇನ್ನಿತರ ಖಾಯಿಲೆಗೆ ಹೋಲಿಸಿದ್ದು, ಕಾಂಗ್ರೆಸ್, ಸಮಾಜವಾದಿ ಪಕ್ಷದ ಲಾಲೂ ಯಾದವ ಪಕ್ಷಗಳು ಅಯೋಧ್ಯೆಯ ರಾಮಮಂದಿರದ ಕಾರ್ಯಕ್ರಮವನ್ನು ಬಹಿಷ್ಕರಿಸಿದ್ದೂ ತುಷ್ಟೀಕರಣದ ಕಾರಣದಿಂದಾಗಿಯೇ. ಎಲ್ಲ ಪಕ್ಷಗಳಿಗೆ ಬಂಪರ್ ಬಹುಮಾನ ಅಂದರೆ ನೂರಕ್ಕೆ ನೂರರಷ್ಟು ಮುಸ್ಲಿಂ ಮತಗಳು ಬಿದ್ದದ್ದೂ ಇದೇ ಕಾರಣಕ್ಕೆ. 24 ರ ಚುನಾವಣೆ ದೇಶದ ಜನರನ್ನುಇಬ್ಭಾಗ ಮಾಡಿದ್ದರ ಹೊಣೆ ಈ ಪಕ್ಷಗಳ ನಾಯಕರೇ ಹೊರಬೇಕು. 18 ನೇ ಲೋಕಸಭೆಯಲ್ಲಿ ವಿರೋಧಪಕ್ಷದ ನಾಯಕನಾಗಿ ರಾಹುಲ್ ಗಾಂಧಿ ಮಾಡಿದ 'ಹಿಂದುಗಳೆಲ್ಲಅಸಹಿಷ್ಣುಗಳು' ಎಂದು ಭಾಷಣ ಮಾಡಿದ್ದೂ ಇದಕ್ಕೆ ಸಾಕ್ಷಿ.

ನಾವೀಗ ಮಾಡಬೇಕಾದದ್ದು ರಾವಣ ಸಂಹಾರದ ಕಾರ್ಯವನ್ನು. ಪ್ರತಿಯೊಬ್ಬ ದೇಶಭಕ್ತನೂ ತನ್ನ ನೆಲದಲ್ಲಿ ತಲೆಯೆತ್ತಿರುವ ಕೀಟಗಳ ಕಳೆಯನ್ನು ಕಿತ್ತೊಗೆಯುವ ಸಂಕಲ್ಪವನ್ನು ಮಾಡಿ, ಅದಕ್ಕಾಗಿ ಕಟಿಬದ್ಧನಾಗಬೇಕು. ದುಷ್ಟರನ್ನು ಬೇರು ಸಮೇತ ನಾಶಮಾಡುವ ಕರ್ತವ್ಯದಲ್ಲಿ ತೊಡಗಬೇಕು. 'ರಾಷ್ಟದೇವೋಭವ' ಎಂಬ ಮಂತ್ರವನ್ನು ಸದಾ ಸ್ಮರಣೆಯಲ್ಲಿಡಬೇಕು. ●

➢ ಪುಟ 9 ರಿಂದ.....

ಬೀರುವಿನಷ್ಟಕ್ಕೆ ದೇಶೀಯ ಎಲ್ಲಾ ಸಾಹಿತ್ಯಗಳು ಸರಿದೂಗುವುದಿಲ್ಲ", "ಸಂಸ್ಕೃತದಲ್ಲಿ ರಚಿತವಾಗಿರುವ ಎಲ್ಲ ಐತಿಹಾಸಿಕ ಮಾಹಿತಿಗಳ ಸಂಗ್ರಹವು ಇಂಗ್ಲೆಂಡಿನ ಪೂರ್ವ ಪ್ರಾಥಮಿಕ ಹಂತದ ಶಾಲೆಗಳಲ್ಲಿ ಉಪಯೋಗಿಸುವ ಪುಸ್ತಕ ಸಂಗ್ರಹಕ್ಕಿಂತ ಕೀಳು ಮಟ್ಟದ್ದು", " ಈ ಎಲ್ಲಾ ವಿದೇಶಿ ಭಾಷೆಗಳಿಗಿಂತ ಈ ಜನರಿಗೆ ಆಂಗ್ಲ ಭಾಷೆಯೇ ತುಂಬಾ ಉಪಯೋಗಿ", "ರಷ್ಯಾವನ್ನು ನಾಗರೀಕರನ್ನಾಗಿ ಮಾಡಿದ್ದೂ ಪಶ್ಚಿಮ ಯುರೋಪ್ ಭಾಷೆಗಳೇ", "ಸಂಸ್ಕೃತ ನಿಸ್ಸಾರವಾದ ಬರಡು ಭಾಷೆ, ಇದರ ಮೂಲಕ ಜ್ಞಾನ ಹೆಚ್ಚಿಸುವುದು ದುಸ್ಸಾಧ್ಯ" ಇತ್ಯಾದಿ, ಇತ್ಯಾದಿ.

**4**. ಭಾರತದ ಸಾಂಸ್ಕೃತಿಕ ಏಕತೆಯನ್ನೇ ಒಡೆಯಲು ಆಂಗ್ಲರು ಹುಟ್ಟುಹಾಕಿದ ಇನ್ನೊಂದು ಸುಳ್ಳು ಎಂದರೆ– ಭಾರತ ಬಹು ಸಂಸ್ಕೃತಿಗಳ ದೇಶ, ಬಹುಜನಾಂಗಗಳ ದೇಶ, ಬಹುರಾಷ್ಟ್ರಗಳ ದೇಶ, ಭಾರತ ಎಂದೂ ಒಂದು ರಾಷ್ಟ್ರವಾಗಿರಲಿಲ್ಲ. ಭಾರತವನ್ನು ಒಟ್ಟುಗೂಡಿಸಿದವರು ನಾವೇ ಇತ್ಯಾದಿ. ಆಂಗ್ಲರು ಭಾರತದ ಅನ್ಯಾನ್ಯ ರಾಜರುಗಳ ಮೇಲೆ ಪ್ರಭುತ್ವ ಸ್ಥಾಪಿಸಿ ರಾಜಕೀಯವಾಗಿ ಭಾರತವನ್ನು ಒಂದು ಮಾಡಿರಬಹುದು. ಆದರೆ ಸಹಸ್ರಾರು ವರ್ಷಗಳಿಂದ ಭಾರತ ತನ್ನ ಸಾಂಸ್ಕೃತಿಕ ಏಕತೆಯನ್ನು ರಕ್ಷಣೆ ಮಾಡಿಕೊಂಡೇ ಬಂದಿದೆ ಎಂಬುದನ್ನು ಮರೆಯಬಾರದು. ಆದರೆ ಬ್ರಿಟಿಷರ ಪ್ರಚಾರದ ವೈಖರಿ ಭಾರತ ಈಗ ತಾನೇ ರೂಪುಗೊಳ್ಳುತ್ತಿರುವ ರಾಷ್ಟ್ರ– Nation in the making ಎಂಬ ಸುಳ್ಳನ್ನೇ ನಾವು ಗಿಳಿಪಾಠ ಒಪ್ಪಿಸುವಂತೆ ಮಾಡಿತು. ಇಲ್ಲಿ ಅನೇಕ ಸಂಸ್ಕೃತಿ ಮತ್ತು ರಾಷ್ಟ್ರಗಳು ಇರುವುದರಿಂದ ಇದೊಂದು ಉಪಖಂಡ ಎಂಬ ಪ್ರಚಾರವು ಸುಳ್ಳನ್ನು ನಿಜ ಮಾಡುವ ತಂತ್ರವೇ ಆಗಿತ್ತು.

**5**. ಭಾರತವು ಪರಕೀಯ ಆಕ್ರಮಕರಿಂದ ನಡೆದ ಸ್ವಾತಂತ್ರ್ಯ ಹರಣದ ಪ್ರಯತ್ನಗಳ ವಿರುದ್ಧ ನಡೆಸಿದ ಸಹಸ್ರಾರು ವರ್ಷಗಳ ಹೋರಾಟದಲ್ಲಿ ಸೋಲು– ಗೆಲುವುಗಳೆರಡನ್ನೂ ಅನುಭವಿಸಿದೆ ಆದರೆ ಇತಿಹಾಸ ಪಠ್ಯಪುಸ್ತಕಗಳಲ್ಲಿ ಕೇವಲ ಸೋಲಿನ ಇತಿಹಾಸವನ್ನು ಕಲಿಸಲು ಆಂಗ್ಲರು ನಿಶ್ಚಯಿಸಿ ಈ ದೀರ್ಘ ಸಂಘರ್ಷದಲ್ಲಿ ಭಾರತದ ಗೆಲುವಿನ ಇತಿಹಾಸವನ್ನು ಹೇಳಿಕೊಡಲೇ ಇಲ್ಲ. ವಾಸ್ತವವಾಗಿ ಭಾರತವು ಬೇರೆ ಯಾವ ದೇಶವೂ ಕಾಣದಷ್ಟು ಪರಕೀಯ ಆಕ್ರಮಣಗಳನ್ನು ಕಂಡಿದೆ. ಇದೇ ರೀತಿ ಆಕ್ರಮಣಗಳಿಗೆ ಒಳಗಾದ ಯುರೋಪ್, ಆಫ್ರಿಕಾ ಮತ್ತು ಏಷ್ಯಾ ಖಂಡದ ಅನೇಕ ದೇಶಗಳು ತಮ್ಮ ಮೂಲ ನಾಗರೀಕತೆ, ಸಂಸ್ಕೃತಿ, ರಾಷ್ಟ್ರೀಯತೆಗಳನ್ನೇ ಕಳೆದುಕೊಂಡುಬಿಟ್ಟಿವೆ. ಭಾರತವು ತನ್ನ ಉಳಿವಿಗೆ ವೀರಾವೇಶದಿಂದ ಹೋರಾಡಿದ ಪರಿಣಾಮವಾಗಿ ಇಂದೂ ನಮ್ಮ ಸಂಸ್ಕೃತಿ, ರಾಷ್ಟ್ರೀಯತೆಗಳನ್ನೇ ಕಳೆದುಕೊಂಡುಬಿಟ್ಟಿವೆ. ಭಾರತವು ತನ್ನ ಉಳಿವಿಗೆ ವೀರಾವೇಶದಿಂದ ಹೋರಾಡಿದ ಪರಿಣಾಮವಾಗಿ ಇಂದೂ ನಮ್ಮ ಸಂಸ್ಕೃತಿ, ರಾಷ್ಟ್ರೀಯತೆಗಳು ಜೀವಂತವಾಗಿವೆ. ಆದರೆ ಕೇವಲ ಸೋಲಿನ ಇತಿಹಾಸವನ್ನು ಮಾತ್ರ ನಮ್ಮ ಮುಂದೆ ಇಟ್ಟು ಜನಗಳಲ್ಲಿ ಪರಾಭೂತ ಮನೋವೃತ್ತಿಯ ಕೀಳರಿಮೆಯನ್ನು ನಿರ್ಮಿಸಲು ಉದ್ದೇಶಪೂರ್ವಕವಾಗಿ ಯತ್ನಿಸಲಾಯಿತು.

ಆಂಗ್ಲಮಾಸಿಕ ರೀಡರ್ಸ್ ಡೈಜೆಸ್ಟ್‌ನ ಪ್ರಕಾಶಕರು ವಿಶ್ವದಲ್ಲಿ ಕಳೆದ ಸುಮಾರು 5000 ವರ್ಷಗಳ ನಂತರದಲ್ಲಿ ಹುಟ್ಟಿರುವ ಎಲ್ಲಾ ಪ್ರಮುಖ ನಾಗರೀಕತೆಗಳು ಉತ್ಕರ್ಷ, ಅವಸಾನ ಇವುಗಳ ವಿವರಗಳನ್ನೊಳಗೊಂಡ 'Histo Map' ಎಂಬ ಪಟವನ್ನು ತಯಾರಿಸಿದ್ದಾರೆ. ನಾಗರೀಕತೆಗಳು ಹುಟ್ಟಿದ ಕಾಲ, ಅವುಗಳ ಬೆಳೆದ ವ್ಯಾಪ್ತಿ ಮತ್ತು ಅದರ ಕಾಲುಗಳು ಹಾಗೂ ಅವುಗಳ ಅವಸಾನ, ಇವುಗಳನ್ನು ಇದರಲ್ಲಿ ಗುರುತಿಸಿದ್ದಾರೆ.

ಇದರ ಪ್ರಕಾರ ವಿಶ್ವದಲ್ಲಿ ಕಳೆದ 5000 ವರ್ಷಗಳಿಂದ ಜೀವಂತವಾಗಿರುವ ನಾಗರೀಕತೆಗಳು ಕೇವಲ ಎರಡೇ ಎರಡು. ಒಂದು ಭಾರತ ಮತ್ತು ಎರಡನೆಯದು ಚೈನಾ, ಅನೇಕ ನಾಗರೀಕತೆಗಳು ಸಂಪೂರ್ಣ ನಿರ್ನಾಮವಾಗಿರುವುದನ್ನು ಅದರಲ್ಲಿ ಕಾಣಬಹುದು. ಭಾರತದ ಮೇಲೆ ಅನೇಕ ಆಕ್ರಮಗಳು ನಡೆದರೂ ಅದು ಜೀವಂತವಿದೆ ಎಂದರೆ ಆಕ್ರಮಣದ ವಿರುದ್ಧ ಸಂಘರ್ಷ ಆಗಿರಲೇಬೇಕು. ಈ ಸಂಘರ್ಷಗಳಲ್ಲಿ ಸೋಲುಗೆಲುವುಗಳಾಗಿ ಅಂತಿಮವಾಗಿ ಇಂದೂ ಸಹ ನಮ್ಮ ನಾಗರೀಕತೆ ಜೀವಂತವಿದೆ. ಇದರ ಅರ್ಥ, ಸಂಘರ್ಷಗಳಲ್ಲಿ ನಾವು ಅನೇಕ ಬಾರಿ ವಿಜಯವನ್ನು ಸಾಧಿಸಿದ್ದೇವೆ. ಆದರೆ ಈ ವಿಜಯ ಗಾಥೆಯ ಉಲ್ಲೇಖವನ್ನು ನಮ್ಮ ಇತಿಹಾಸದ ಪುಸ್ತಕಗಳಲ್ಲಿ ಮಾಡದೆ ಆಂಗ್ಲರು ಈ ಅಂಶವನ್ನು ದುರುದ್ದೇಶದಿಂದ ಕಡೆಗಣಿಸಿದ್ದಾರೆ.

ಮುಂದುವರೆಯುವುದು...

**ನಿಮ್ಮ ಕೈಲಾದಷ್ಟು ಗುರುವನ್ನು ಪ್ರೀತಿಸಿ, ಆದರೆ ಸ್ವತಂತ್ರವಾಗಿ ಆಲೋಚಿಸಿ – ಸ್ವಾಮಿ ವಿವೇಕಾನಂದ**

# ಅನ್ನದಾತನೆಂದರೆ ನಮಗೆಲ್ಲ ಹೆಮ್ಮೆಯಲ್ಲವೇ?

"ಭಾರತದ ಅಭಿವೃದ್ಧಿ, ಕೃಷಿ ಮತ್ತು ಮೂಲ ಉದ್ಯೋಗದಲ್ಲಿ ಅಡಗಿದೆ. ಅದಕ್ಕಾಗಿ ಸ್ವತಂತ್ರಾನಂತರ ಭಾರತದಲ್ಲಿ ಮೂಲ ಶಿಕ್ಷಣಕ್ಕೆ ಆದ್ಯತೆ ನೀಡಬೇಕೆಂದು" ಹೇಳಿದ ಮಹಾತ್ಮ ಗಾಂಧೀಜಿಯವರ ಮಾತು ಹಾಗೂ "ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು" ಎನ್ನುವ ಸಾಮಾನ್ಯರ ಮಾತಿನ ಸತ್ಯವನ್ನು ಸ್ವತಂತ್ರ ಗಳಿಸಿ 80 ದಶಕಗಳ ಹತ್ತಿರಕ್ಕೆ ಬಂದರೂ ನಾವು ಅರ್ಥಮಾಡಿಕೊಳ್ಳಲಿಲ್ಲ ಎನ್ನುವುದನ್ನು ಈ ಕೆಳಗಿನ ಘಟನೆಗಳು ತಿಳಿಸುತ್ತವೆ.

• ಕಷ್ಟಪಟ್ಟು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ನೀಡುವ ಕಾಲ ಇನ್ನೂ ಬರಲಿಲ್ಲ. • ಬೇಕೆನಿಸಿದಷ್ಟು ನೀರಾವರಿ ಕ್ಷೇತ್ರದ ವ್ಯಾಪ್ತಿ ವಿಸ್ತರಿಸಲಿಲ್ಲ. • ವ್ಯವಸಾಯ ಮಾಡುವ ಕನಿಷ್ಠ ಉದ್ಯೋಗ ಎನ್ನುವ ಮನೋಭಾವ ಸಮಾಜದಿಂದ ದೂರ ಆಗಲೇ ಇಲ್ಲ. • ಕೃಷಿ ಕ್ಷೇತ್ರದಲ್ಲಿ ಸಮಸ್ಯೆಗಳಿಗೆ ಕನಿಷ್ಠ ಪರಿಹಾರ ಹುಡುಕುವ ಪ್ರಾಮಾಣಿಕ ಪ್ರಯತ್ನ ನಡೆಯಲಿಲ್ಲ.

ಹಾಗಾದರೆ ಇನ್ನು ಎಷ್ಟು ದಿನ ಇಸ್ರೇಲ್ ಮಾದರಿ ವ್ಯವಸಾಯ ಪದ್ಧತಿ ಭಾರತದಲ್ಲಿ ಬರಬೇಕು ಎಂದು ಹೇಳುತ್ತಲೇ ಹೋಗುವುದು. ನಾವೆಷ್ಟು ಮನೆ ಮೇಲೆ ಮನೆ ಕಟ್ಟಿದರೂ, ಕೋಟಿ ರೂಪಾಯಿಯಿಂದ ಕಾರಿನಲ್ಲಿ ಓಡಾಡಿದರೂ, ತಿನ್ನಲು ಮಾತ್ರ ಅನ್ನಬೇಕು. ಈ ಅನ್ನ ಉತ್ಪಾದನೆಯಲ್ಲಿ ತೊಡಗಿದವನ ಸ್ಥಿತಿಗತಿಯನ್ನು ಸುಧಾರಿಸುವುದು ಯಾವಾಗ... ಕೊನೆಯ ಪಕ್ಷ ಕೃಷಿ ಉದ್ಯೋಗವನ್ನು ಗೌರವದಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕಲ್ಲವೇ..?

ಇತ್ತೀಚಿನ ಕೆಲವು ಘಟನೆಗಳು ವ್ಯವಸಾಯದಲ್ಲಿ ತೊಡಗಿದ ಕೃಷಿಕರ ಜೀವನದ ಸ್ಥಿತಿಗತಿಗಳನ್ನು ಪರಿಚಯಿಸುತ್ತವೆ.

- ಮಲೆ ಮಹದೇಶ್ವರ ಬೆಟ್ಟಕ್ಕೆ ಇತ್ತೀಚಿಗೆ ಯುವಕರ ತಂಡದ ಭೇಟಿ ನೀಡಿ ಪೂಜೆ ಸಲ್ಲಿಸಿ ಬೇಡಿಕೆಯನ್ನು ದೇವರ ಮುಂದಿಟ್ಟಿತು. ಅದೇನೆಂದರೆ " ನಾವು ಕೃಷಿ ಮಾಡುತ್ತಿರುವುದರಿಂದ ನಮಗೆ ಮದುವೆಗೆ ಹೆಣ್ಣು ಸಿಗುತ್ತಿಲ್ಲ" ಎಂದು. ಮೇಲ್ನೋಟಕ್ಕೆ ವಿಚಿತ್ರ ಅನಿಸಿದರು ಅದನ್ನು ವಿಶ್ಲೇಷಣೆ ಮಾಡಿದಾಗ ಸಮಸ್ಯೆಯ ಭೀಕರತೆ ಅರ್ಥ ತಿಳಿಯುತ್ತದೆ ಹಾಗೆ ಕೃಷಿ ಎನ್ನುವುದು ಸಮಾಜದ ಕಣ್ಣಲ್ಲಿ ಅಷ್ಟೊಂದು ಕನಿಷ್ಟ ಉದ್ಯೋಗವಾಯಿತೆ...
- ಕಾರು ಶೋ ರೋಮ್‌ಗೆ ಬಂದರೆ ರೈತರನ್ನು ಅವಮಾನಿಸಿ ಕಳಿಸಿದ ಸಿಬ್ಬಂದಿಯು, ಸುದ್ದಿ ಮಾಧ್ಯಮದಲ್ಲಿ ಬಂದ ಮೇಲೆ ಕಂಪನಿಯು ಕ್ಷಮೆ ಕೇಳಿತು.
- ರೈತರನ್ನು ಅವಮಾನಿಸಿದ ಘಟನೆ ಮತ್ತೆ ರಾಜ್ಯದ ರಾಜಧಾನಿ ಬೆಂಗಳೂರಲ್ಲಿ ನಡೆದಿದೆ. ಹಾವೇರಿ ಜಿಲ್ಲೆಯ ಅರೆಮಲ್ಲಾಪುರದ ರೈತರೊಬ್ಬರು ಮಗನ ಜೊತೆಯಲ್ಲಿ ಜಿ.ಟಿ ಮಾಲ್‌ಗೆ ಹೋದಾಗ ಅಲ್ಲಿಯ ಸಿಬ್ಬಂದಿ, ಸಂಪ್ರದಾಯಿಕ ಉಡುಗೆಯಲ್ಲಿರುವ ರೈತ ಎನ್ನುವ ಕಾರಣಕ್ಕೆ ಒಳ ಬಿಡದೆ ಅವಮಾನಿಸಿದ್ದು ನಮ್ಮ ಮಾನಸಿಕತೆಗೆ ಹಿಡಿದ ಕನ್ನಡಿ. ಸಮೂಹ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳ ಪ್ರಭಾವದಿಂದಾಗಿ ಕರ್ನಾಟಕದ ವಿಧಾನಸಭೆಯಲ್ಲಿ ಚರ್ಚೆಯಾಗಿ ಜಿ.ಟಿ ಮಾಲ್‌ನ ಮಾಲೀಕ ರೈತನಿಗೆ ಕ್ಷಮೆ ಕೇಳಿ ಸನ್ಮಾನಿಸಿದ್ದು ಆಯಿತು ಹಾಗೂ ಸರ್ಕಾರ ಏಳು ದಿನಗಳ ಕಾಲ ಜಿ ಟಿ ಮಾಲ್ ಬಂದ್ ಮಾಡಿ ಶಿಕ್ಷೆ ನೀಡಿದ್ದು ಸ್ವಲ್ಪ ಸಮಾಧಾನದ ವಿಷಯ.

ಈ ಮೇಲಿನ ಉದಾಹರಣೆಗಳು ಮಾಧ್ಯಮದಲ್ಲಿ ಪ್ರಸಾರವಾದವು ಎನ್ನುವ ಕಾರಣಕ್ಕೆ ನಮ್ಮೆಲ್ಲರ ಗಮನಕ್ಕೆ ಬಂದವು. ಆದರೆ ಗಮನಕ್ಕೆ ಬಾರದೇ ಅದೆಷ್ಟು ರೈತರು ಕಛೇರಿಗಳಲ್ಲಿ, ಮಾರುಕಟ್ಟೆಗಳಲ್ಲಿ, ಇನ್ನು ಅನೇಕ ಕಡೆಗಳಲ್ಲಿ ನಿತ್ಯ ಜೀವನದಲ್ಲಿ ಅವಮಾನ ಅನುಭವಿಸುತ್ತಿದ್ದಾರೆ ಎನ್ನುವುದು ಊಹಿಸಲು ಅಸಾಧ್ಯವಾದದ್ದು, ವಿಜ್ಞಾನ ತಂತ್ರಜ್ಞಾನದಲ್ಲಿ ಚಂದ್ರನನ್ನು ತಲುಪುವ ಬೆಳವಣಿಗೆ ಸಾಧಿಸಿದರು. ನಮ್ಮಲ್ಲಿರುವ ಕೊಳಕು ಭಾವನೆಗಳನ್ನು ತೊಡೆದು ಹಾಕುವುದು ಯಾವಾಗ? ಇನ್ನು ಮುಂದೆಯಾದರೂ ಈ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕಾದದ್ದು ನಮ್ಮ ಕರ್ತವ್ಯ. ಅದಕ್ಕಾಗಿ ಅನ್ನದಾತರ ಮಹತ್ವದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ.

- ಸಮಾಜದಲ್ಲಿ ಗಣ್ಯರೆನಿಸುವವರು ಅನ್ನದಾತರನ್ನು ಗೌರವಿಸುವ ಪರಿಪಾಠವನ್ನು ಪ್ರಾರಂಭಿಸಬೇಕು.
- ದೇಶ ಕಾಯುವ ಸೈನಿಕರಿಗೆ ಮತ್ತು ಅನ್ನ ಹಾಕುವ ರೈತರಿಗೆ ಕೊಡುವ ಗೌರವ ದೇಶಕ್ಕೆ ನೀಡುವ ಗೌರವ ಎನ್ನುವುದನ್ನು ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳಿಗೆ ಮನಮುಟ್ಟುವಂತೆ ಮಾಡಬೇಕು.
- ಜೈ ಜವಾನ್ ಜೈ ಕಿಸಾನ್ ಎಂದು ಹೇಳುವ ವಾಕ್ಯದ ಮಹತ್ವವನ್ನು ನಮ್ಮ ಆಡಳಿತ ಚುಕ್ಕಾಣಿಯನ್ನು ಹಿಡಿದವರಿಂದ ಎಲ್ಲರಲ್ಲೂ ತಿಳಿಸುವ ಕಾರ್ಯಮಾಡಬೇಕು.
- ಎನ್‌ಸಿಸಿ ಮತ್ತು ಸ್ಕೌಟ್ ಗೈಡ್‌ಗಳು ಸೈನಿಕ ವ್ಯವಸ್ಥೆಯನ್ನು ಮಕ್ಕಳಿಗೆ ಪರಿಚಯಿಸಿದಂತೆ ಕೃಷಿ ಚಟುವಟಿಕೆಗಳನ್ನು ಎಳೆಯ ವಯಸ್ಸಿನಲ್ಲಿಯೇ ಮಕ್ಕಳಿಗೆ ಪರಿಚಯಿಸುವ ಕಾರ್ಯಕ್ಕಾಗಿ ಯೋಜನೆ ಮಾಡಬೇಕಾದ ಅವಶ್ಯಕತೆ ಇದೆ.
- ಸಾಂಪ್ರದಾಯಿಕ ಉಡುಗೆಗಳಲ್ಲಿರುವ ರೈತರನ್ನು ಕಛೇರಿಗಳಲ್ಲಿ ಗೌರವದಿಂದ ಕಾಣುವ ಮನಸ್ಥಿತಿ ತರುವಂತಹ ಪ್ರಯತ್ನಗಳನ್ನು ಪ್ರಾರಂಭಿಸಬೇಕು.
- ಈ ವಿಷಯ ಸಮಾಜದಲ್ಲಿ ಎಲ್ಲರ ಮಧ್ಯದಲ್ಲಿಯೂ ಚರ್ಚೆಮಾಡುವಂತಾಗಲಿ ಅನ್ನದಾತನಾದ ರೈತನನ್ನು ಗೌರವಿಸುವ ಮತ್ತು ಅವನ ಸ್ಥಿತಿಗತಿಗಳನ್ನು ಉತ್ತಮ ಪಡಿಸುವ ಕಾರ್ಯದಲ್ಲಿ ನಾವೆಲ್ಲರು ಪಾಲುದಾರರಾಗಬೇಕು ಈ ಕಾರ್ಯವನ್ನು ಮೊದಲು ನನ್ನಿಂದ ಪ್ರಾರಂಭವಾಗಬೇಕು ಎನ್ನುವ ಮನೋಭಾವವನ್ನು ನಾವು ಬೆಳೆಸಿಕೊಳ್ಳಬೇಕಾದದ್ದು ಬಹಳ ಮುಖ್ಯವಾಗಿದೆಯಲ್ಲವೇ?

ಚಿದಾನಂದ ಆ ಕೇಸ್ಕರ ಪಾಟೀಲ
ಎಂ.ಎ. ಇತಿಹಾಸ, ಎಂ.ಎ. ಸಮಾಜಶಾಸ್ತ್ರ.
ಎಂ.ಎಸ್ಸಿ. ಭೂಗೋಳಶಾಸ್ತ್ರ.
ಅಧ್ಯಾಪಕರು – ಬೆಳಗಾವಿ.
9449114285, chidapatil@gmail.com



---



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ದ ನಿಯೋಗ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರಾದ ಶ್ರೀಮತಿ ಸಿಂಧು ರೂಪೇಶ ರವರನ್ನು ಭೇಟಿಯಾಗಿ ಪಿ ಯು ಕಾಲೇಜುಗಳ ಮಾನ್ಯತೆ ನವೀಕರಣ, ಅನುದಾನಿತ ಉಪನ್ಯಾಸಕರ ಕಾರ್ಯಭಾರ ಸರಿಪಡಿಸುವುದು, ಖಾಲಿ ಹುದ್ದೆಗಳ ಭರ್ತಿ ಗೆ ಅನುಮತಿ ನೀಡುವ ಬಗ್ಗೆ, ಅನುದಾನರಹಿತ ಕಾಲೇಜುಗಳ SATS Portal ಚಾಲ್ತಿ ಮಾಡುವ ಬಗ್ಗೆ ಮತ್ತು ದ್ವಿತೀಯ ಪಿಯುಸಿ 1,2,3 ಪರೀಕ್ಷೆ ನಡೆಯುವ ಪರೀಕ್ಷಾ ಕೇಂದ್ರಗಳ ಮೇಲೆ ಆಗುತ್ತಿರುವ ಒತ್ತಡ ಮತ್ತು ತರಗತಿ ಗಳು ಸರಿಯಾಗಿ ನಡೆಯದಿದ್ದರೆ ಫಲಿತಾಂಶ ಕುಸಿತವಾಗಿವ ಸಮಸ್ಯೆಗಳ ಬಗ್ಗೆ ಸುದೀರ್ಘ ಸಭೆ ನಡೆಸಿ ಮನವಿ ಸಲ್ಲಿಸಲಾಯಿತು. ABRSM ಅಖಿಲ ಭಾರತ ಸಹ ಸಂಘಟನಾ ಮಂತ್ರಿ ಲಕ್ಷ್ಮಣ್ ಜೀ, ಕಾರ್ಯಾಧ್ಯಕ್ಷರಾದ ಶ್ರೀ ಅರುಣ್ ಶಹಾಪುರ, ಅಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ, KRMSS ಉಪಾಧ್ಯಕ್ಷರಾದ ಡಾ. ಶಿವಪೂಜಿ ಕೋಟಿ ನಿಯೋಗದಲ್ಲಿ ಉಪಸ್ಥಿತರಿದ್ದರು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-08-2024 Date of Posting 20th or 21st of every month Posted at Periodical Rate

# ಬೀದರ್‌ನಲ್ಲಿ ಕ.ರಾ.ಮಾ.ಶಿ. ಸಂಘದ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ




ಬೀದರ್: ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಪರಮೇಶ್ವರ್ ಬಿರಾದಾರ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ನಗರದ ಸರಸ್ವತಿ ಶಾಲೆಯ ಗಿರಿಜಾ ಸಭಾ ಮಂಟಪದಲ್ಲಿ ಗುರುವಾರ ನಡೆದ ಸಭೆಯಲ್ಲಿ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನೂತನ ಪದಾಧಿಕಾರಿಗಳಲ್ಲಿ ವಿಜಯಕುಮಾರ ಪಾಟೀಲ ಯರನಳ್ಳಿ (ಗೌರವಾಧ್ಯಕ್ಷ), ರಮೇಶ ಪಾಟೀಲ (ಪ್ರಧಾನ ಕಾರ್ಯದರ್ಶಿ) ಹಾಗೂ ಸಂತೋಷ್ ಮಂಗಳೂರೆ (ಖಜಾಂಚಿ) ಸೇರಿದ್ದಾರೆ.

ಸಂಘದ ಪ್ರಾಂತ ಕಾರ್ಯದರ್ಶಿ ಮಹೇಶ ಬಸರಕೋಡ ಅವರು ಪ್ರಾಸ್ತಾವಿಕವಾಗಿ ಮಾತನಾಡುವುದರೊಂದಿಗೆ ಜಿಲ್ಲಾ ಘಟಕದ ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಟ್ಟರು. ನೂತನ ಪದಾಧಿಕಾರಿಗಳು ಶಿಕ್ಷಕರ ಹಿತರಕ್ಷಣೆಗೆ ಪೂರಕವಾಗಿ ಕಾರ್ಯ ನಿರ್ವಹಿಸಬೇಕು. ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬೇಕು ಎಂದು ಸಲಹೆ ಮಾಡಿದರು.

ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಜಶೇಖರ ಮಂಗಲಗಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಲಬುರಗಿ ಜಿಲ್ಲಾ ಘಟಕದ ಅಧ್ಯಕ್ಷ ಸಂಜುಕುಮಾರ ಪಾಟೀಲ, ಹಿರಿಯ ಸದಸ್ಯ ಬಸವರಾಜ ಸ್ವಾಮಿ, ವಿಭಾಗ ಪ್ರಮುಖರಾದ ಚಂದ್ರಶೇಖರ ಪಾಟೀಲ, ಶಾಲಿವಾನ್ ಗಂದಗೆ, ಪ್ರತಿಭಾ ಚಾಮಾ ಮತ್ತಿತರರು ಉಪಸ್ಥಿತರಿದ್ದರು.

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ-ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com